ವಿಜಯಪುರ | ಸಂಪುಟ 01 | ಸಂಚಿಕೆ 259 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ


ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಶುಕ್ರವಾರ ಡಿಸೆಂಬರ್ 08, 2023

"ರಾಜ್ಯದಲ್ಲಿ ಆಡಳಿತ ಕುಸಿದು ಬಿದ್ದಿದೆ. ಕೇಂದ್ರದಲ್ಲಿ ಅಧಿಕಾರ ಹಿಡಿಯಬೇಕೆಂದು ಉಚಿತ ಯೋಜನೆಗಳನ್ನು ನೀಡುತ್ತಿದ್ದಾರೆ. ಒಂದೂ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡದೇ, ಕೇವಲ ಹಿಂದಿನ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಉದ್ಘಾಟನೆ ಮಾಡುತ್ತಿದ್ದಾರೆ."



– ಅರುಣ ಶಹಾಪೂರ
ವಿಧಾನಪರಿಷತ್ ಮಾಜಿ ಸದಸ್ಯರು

### ವಿದೇಶಗಳಿಗೆ ಮೋದಿ ನೆರವು | ಕರ್ನಾಟಕ ಬರ ಪರಿಹಾರ ವಿಚಾರದಲ್ಲಿ ಅಸಡ್ಡೆ | ಸಿಎಂ ಸಿದ್ದರಾಮಯ್ಯ ಕಳವಳ

# ರಾಜ್ಯ ಬರ ಪರಿಸ್ಥಿತಿ ಬಗ್ಗೆ ಪ್ರಧಾನಿ ಮೌನಕ್ಕೆ ಸಿಎಂ ಆಕ್ಷೇಪ!

ಬೆಂಗಳೂರು: ಕರ್ನಾಟಕ ತೀವ್ರ ಬರದಿಂದ ತತ್ತರಿಸುತ್ತಿದ್ದು ಬರ ಪರಿಹಾರ ನೀಡುವಂತೆ ಕೇಂದ್ರ ಸರ್ಕಾರದ ಮುಂದೆ ಹಲವು ಬಾರಿ ಅಲವತ್ತುಕೊಂಡರೂ ರಾಜ್ಯದ ರೈತರ ಸಂಕಷ್ಟದ ವಿಚಾರದಲ್ಲಿ ಅಂತಾರಾಷ್ಟ್ರೀಯ ಸಮುದಾಯದ ನೆರವಿಗೆ ಧಾವಿಸುವ ರೀತಿಯ ಕಾಳಜಿಯನ್ನು ಏಕೆ ತೋರಿಸಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶ್ನಿಸಿದ್ದಾರೆ.

ಜ್ವಾಲಾಮುಖಿ ಸ್ಫೋಟದ ನಂತರ ಭಾರತ ಸರ್ಕಾರವು ಪಪುವಾ ನ್ಯೂಗಿನಿಯಾಕ್ಕೆ 1 ಮಿಲಿಯನ್ ಡಾಲರ್ ನೆರವು ಮತ್ತು ಕೀನ್ಯಾಕ್ಕೆ ಕೃಷಿಯನ್ನು ಮೇಲ್ದರ್ಜೆಗೆ ಏರಿಸಲು 250 ಮಿಲಿಯನ್ ಅಮೆರಿಕ ಡಾಲರ್ ನೆರವನ್ನು ಘೋಷಿಸಿದೆ ಎಂಬ ಮಾಧ್ಯಮ ವರದಿಗಳನ್ನು ಉಲ್ಲೇಖಿಸಿದ ಸಿದ್ದರಾಮಯ್ಯ ಅವರು, ಕರ್ನಾಟಕದ ಬರ ಪರಿಸ್ಥಿತಿಯ ಬಗ್ಗೆ ಪ್ರಧಾನಿ ಮೌನವಾಗಿರುವುದೇಕೆ, ಪ್ರತಿಕೂಲ ಪರಿಸ್ಥಿತಿಯಲ್ಲಿ ಎಲ್ಲಾ ರಾಜ್ಯಗಳು ಮತ್ತು ನಾಗರಿಕರನ್ನು ಸಮಾನವಾಗಿ ಯಾಕೆ ಪರಿಗಣಿಸುವುದಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಇತರ ದೇಶಗಳಿಗೆ ಪ್ರಧಾನಿ ಮೋದಿ ಅವರು ನೆರವಿನ ಹಸ್ತವನ್ನು ವಿಸ್ತರಿಸುವುದಕ್ಕೆ ನಮಗೆ ಯಾವುದೇ ವಿರೋಧವಿಲ್ಲ. ಭಾರತದ ರಾಜತಾಂತ್ರಿಕ ನೆರವು ಮತ್ತು ಮೃಧು ಶಕ್ತಿ ರಾಜತಾಂತ್ರಿಕತೆ. ಇದು ಸ್ವಾತಂತ್ರ್ಯ ಪೂರ್ವದಿಂದಲೂ ನಡೆದುಕೊಂಡು ಬರುತ್ತಿದೆ ಎಂದು ಮುಖ್ಯಮಂತ್ರಿಗಳು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.



ಆದರೆ ಬರಗಾಲದಿಂದ ಬೆಳೆ ನಷ್ಟ ಅನುಭವಿಸಿದ ನಮ್ಮ ರೈತರ ಬಗ್ಗೆ ಮೋದಿಯವರು ಅದೇ ಮಟ್ಟದ ಕಾಳಜಿಯನ್ನು ಏಕೆ ಪ್ರದರ್ಶಿಸುವುದಿಲ್ಲ? ಕನ್ನಡಿಗರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯಾಕೆ ಇಷ್ಟೊಂದು ಅಸಡ್ಡೆ? ಎಂದು ಪ್ರಶ್ನಿಸಿದ್ದಾರೆ.

ರಾಜ್ಯದ ರೈತರಿಗೆ ಪರಿಹಾರ ನೀಡಲು ಕೇಂದ್ರ ಸರ್ಕಾರ ಇನ್ನೂ ಪೂರ್ವಭಾವಿ ಸಭೆ ನಡೆಸಿಲ್ಲ. ಇದರ ಪರಿಣಾಮವಾಗಿ ರಾಜ್ಯದಿಂದ ತುರ್ತು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಮೊದಲ ಹಂತದಲ್ಲಿ ಅರ್ಹ ರೈತರಿಗೆ ತಲಾ 2,000 ರೂ.ವರೆಗೆ ಬೆಳೆ ಪರಿಹಾರ ಹಣವನ್ನು ಬಿಡುಗಡೆ ಮಾಡಲಾಗಿದೆ ಎಂದರು.

ರಾಜ್ಯದ ಮೂವರು ಸಚಿವರು ದೆಹಲಿಗೆ ತೆರಳಿದರೂ ಸಕಾರಾತ್ಮಕ ಸ್ಪಂದನೆ ಸಿಕ್ಕಿಲ್ಲ. ಪರಿಹಾರಕ್ಕಾಗಿ 18,171 ಕೋಟಿ ರೂಪಾಯಿ ಆರ್ಥಿಕ ನೆರವು ನೀಡುವಂತೆ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ. ಪ್ರಸ್ತುತ ಕೇಂದ್ರವು ಕರ್ನಾಟಕದ ಪಾಲಿನ ತೆರಿಗೆ ಹಣವನ್ನು ಬಿಡುಗಡೆ ಮಾಡಿದರೂ ಸಾಕು, ಅದು ರಾಜ್ಯದ ರೈತರ ಸಂಕಷ್ಟಗಳನ್ನು ನಿವಾರಿಸಲು ಸಹಾಯವಾಗುತ್ತದೆ ಎಂದು ಮುಖ್ಯಮಂತ್ರಿ ಹೇಳಿದರು.

ಬರದಿಂದಾಗಿ ರಾಜ್ಯದ 48.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಹೀಗಾಗಿ ರಾಜ್ಯ ಸರ್ಕಾರವು 4,663 ಕೋಟಿ ರೂಪಾಯಿ ಬೆಳೆ ನಷ್ಟ ಪರಿಹಾರವನ್ನಾಗಿ ನೀಡಿ ಎಂದು ಕೇಂದ್ರಕ್ಕೆ ಕೇಳಿದೆ. ಈ ಬಗ್ಗೆ ಕೇಂದ್ರ ಕೃಷಿ ಮತ್ತು ವಸತಿ ಸಚಿವರನ್ನು ನೇರವಾಗಿ ಭೇಟಿ ಮಾಡಲು ಅವಕಾಶ ನೀಡುವಂತೆ ಪತ್ರ ಬರೆದಿದ್ದೆ ಆದರೆ ಅವರು ನಮಗೆ ಇನ್ನೂ ಕಾಲಾವಕಾಶ ನೀಡಿಲ್ಲ ಎಂದರು.

ಈ ವರ್ಷ ಸರಿಯಾಗಿ ಮಳೆಯಾಗದ ಕಾರಣ ಕರ್ನಾಟಕದ ಬಹುತೇಕ ಭಾಗಗಳು ಬರಗಾಲಕ್ಕೆ ತುತ್ತಾಗಿವೆ. ರಾಜ್ಯದ 136 ತಾಲ್ಲೂಕುಗಳ ಪೈಕಿ 123 ತಾಲ್ಲೂಕುಗಳನ್ನು ಬರಪೀಡಿತ ಎಂದು ರಾಜ್ಯ ಸರ್ಕಾರ ಘೋಷಿಸಿದೆ.

## ಸರ್ಕಾರ ವಿಫಲ: ರಾಜ್ಯಪಾಲರಿಗೆ ಹೆಚ್ಡಿಕೆ ದೂರು



ಬೆಂಗಳೂರು: ರಾಜ್ಯಾದ್ಯಂತ ಜೆಡಿಎಸ್ ಪಕ್ಷ ನಡೆಸಿದ್ದ ಬರ ಅಧ್ಯಯನ ವರದಿಯನ್ನು ಮಾಜಿ ಮುಖ್ಯಮಂತ್ರಿಗಳು ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಅವರು, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರಿಗೆ ಸಲ್ಲಿಸಿದ್ದಾರೆ.

ರಾಜ್ಯದಲ್ಲಿ ಬರ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲು ಕೇಂದ್ರದಿಂದ ಅನುದಾನ ಕೊಡಿಸಲು ಕೂಡಲೇ ಮಧ್ಯಪ್ರವೇಶ ಮಾಡಬೇಕೆಂದು ಮನವಿ ಮಾಡಿದ್ದಾರೆ.

ಈ ವೇಳೆ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ರಾಜ್ಯಪಾಲರು, ನಿಮ್ಮ ಅಹವಾಲನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು. ರಾಜ್ಯ ಎದುರಿಸುತ್ತಿರುವ ತೀವ್ರ ಪರಿಸ್ಥಿತಿಯನ್ನು ಕೇಂದ್ರದ ಗಮನಕ್ಕೆ ತರುವುದಾಗಿ ತಿಳಿಸಿದರು.

ಮಾನ್ಸೂನ್ ವೈಫಲ್ಯದಿಂದ ರಾಜ್ಯದಲ್ಲಿ ಒಟ್ಟು 48.15 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಈ ಪೈಕಿ 46.09 ಲಕ್ಷ ಹೆಕ್ಟೇರ್ ಕೃಷಿ ಬೆಳೆ ಹಾಗೂ 2.06 ಲಕ್ಷ ಹೆಕ್ಟೇರ್ ತೋಟಗಾರಿಕೆ ಬೆಳೆ ನಾಶವಾಗಿದೆ. ರಾಜ್ಯ ಸರಕಾರವೇ ಅಂದಾಜು ಮಾಡಿರುವಂತೆ ರಾಜ್ಯದಲ್ಲಿ ಒಟ್ಟು 35.162.02 ಕೋಟಿ ರೂಪಾಯಿಯಷ್ಟು ಬೆಳೆ ಹಾನಿ ಆಗಿದ್ದು, ಎನ್ ಸಿಆರ್ ಎಫ್ ಮಾನದಂಡದ ಅಡಿಯಲ್ಲಿ ಕೇಂದ್ರ ಸರಕಾರದಿಂದ 18,171.44 ಕೋಟಿ ರೂಪಾಯಿ ಪರಿಹಾರವನ್ನು ರಾಜ್ಯ ಸರಕಾರ ಕೋರಿದೆ. ಆದರೆ, ಇಷ್ಟು ಮೊತ್ತದ ಪರಿಹಾರದಿಂದ ರಾಜ್ಯದ ರೈತರ ಬವಣೆ ನೀಗುವುದಿಲ್ಲ. ಕೃಷಿಕರು ಅನುಭವಿಸಿರುವ ಒಟ್ಟಾರೆ ನಷ್ಟದಲ್ಲಿ ಶೇ.10ರಷ್ಟು ಪರಿಹಾರವೂ ಅವರಿಗೆ ಸಿಗುವುದಿಲ್ಲ. ಆದ್ದರಿಂದ ಈ ಹಿಂದೆ ನೀಡದಂತೆ ಪ್ರತಿ ಹೆಕ್ಟೇರ್ ಬೆಳೆ ನಾಶಕ್ಕೆ ಹೆಚ್ಚುವರಿ ಪರಿಹಾರವಾಗಿ 17,500 ರೂಪಾಯಿ ನೀಡಬೇಕು. ಈ ನಿಟ್ಟಿನಲ್ಲಿ ತಾವು ರಾಜ್ಯ ಸರಕಾರಕ್ಕೆ ಕಟ್ಟುನಿಟ್ಟಿನ ನಿರ್ದೇಶನ ನೀಡಬೇಕು ಎಂದು ಕುಮಾರಸ್ವಾಮಿ ಅವರು ಮನವಿ ಮಾಡಿದ್ದರು.

ರಾಜ್ಯದಲ್ಲಿ ಬರ ಪರಿಸ್ಥಿತಿ ನಿರ್ವಹಣೆ ಹಾಗೂ ಪರಿಹಾರ ಕ್ರಮ ಕೈಗೊಳ್ಳುವಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ಸಂಪೂರ್ಣವಾಗಿ ವಿಫಲವಾಗಿದೆ. ಅನೇಕ ಜಿಲ್ಲೆಗಳಲ್ಲಿ ಕುಡಿಯುವ ಸಮಸ್ಯೆ ಇದೆ. ಜಾನುವಾರುಗಳು ಕೂಡ ಸಂಕಷ್ಟದಲ್ಲಿವೆ. ರಾಜಧಾನಿ ಬೆಂಗಳೂರಿನಲ್ಲಿಯೂ ನೀರಿನ ಸಂಕಷ್ಟ ಎದುರಾಗಿದೆ ಎಂದು ಇದೇ ವೇಳೆ ಆರೋಪಿಸಿದರು.

ರಾಜ್ಯ ಸರಕಾರ ಬರ ಪರಿಸ್ಥಿತಿಯನ್ನು ಬಹಳ ಅಸಡ್ಡೆಯಿಂದ ನೋಡುತ್ತಿದೆ. ತೀವ್ರ ನಷ್ಟ ಅನುಭವಿಸಿದ ರೈತರಿಗೆ ಬರ ಪರಿಹಾರ ನೀಡದೆ ರಾಜ್ಯ ಸರಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ ಎಂಬ ಅಂಶವನ್ನು ರಾಜ್ಯಪಾಲರ ಗಮನಕ್ಕೆ ತಂದರು.

ರಾಜ್ಯದಲ್ಲಿ ರೈತರ ಆತ್ಮಹತ್ಯೆ ಸರಣಿ ಆರಂಭವಾಗಿದೆ. ಕಳೆದ ಆರು ತಿಂಗಳಿನಿಂದ ರಾಜ್ಯ ಸರಕಾರ ರೈತರ ಬಗ್ಗೆ ಎಳ್ಳಷ್ಟೂ ಕಾಳಜಿ ವಹಿಸಿಲ್ಲ. ರಾಜಕೀಯದಲ್ಲಿ ಮೈ ಮರೆತಿದೆ ಎಂದು ಅವರು ಹೇಳಿದರು.

### ರಾಜ ನುಡಿ

ದೇವರು ಎಲ್ಲಾ ಮನುಷ್ಯರನ್ನು ಒಂದೇ ಮಣ್ಣಿನಿಂದ ಮಾಡಿರಬಹುದು ಆದರೆ ಒಂದೇ ಅಚ್ಚಿನಿಂದಲ್ಲ. ಹೀಗಾಗಿ ಆಕಾರ, ಆಚಾರ, ವಿಚಾರ ಯಾವುದೊಂದರಲ್ಲಿಯೂ ಒಬ್ಬರಿಗೊಬ್ಬರು ಹೋಲಿಕೆಯಾಗುವುದಿಲ್ಲ. ಇದು ಸೃಷ್ಟಿಕರ್ತನ ತಾಕತ್ತು, ಇರಲಿ ಅವನಲ್ಲಿ ನಿಯತ್ತು.

–ಡಾ. ರಾಜಶೇಖರ ನಾಗೂರ

## ಯುವಕನಿಗೆ ಚಾಕು ಇರಿತ, ಗಂಭೀರ ಗಾಯ

ಉದಯರಶ್ಮಿ ನ್ಯೂಸ್

ಆಲಮಟ್ಟಿ: ಗ್ರಾಮದಲ್ಲಿ ಯುವಕನ ಮೇಲೆ ಚೂರಿ ಇರಿದ ಘಟನೆ ಬುಧವಾರ ಸಂಜೆ ಜರುಗಿದೆ.

ಅಭಿಲಾಷ ಕಾಳೆ ಚಾಕು ಇರಿತಕ್ಕೆ ಒಳಗಾದ ಯುವಕ.


ಮುದ್ದೇಬಿಹಾಳ ಪಟ್ಟಣದ ನಾಲ್ವರು ಯುವಕರು ಆಲಮಟ್ಟಿ ಉದ್ಯಾನ ವೀಕ್ಷಣೆಗೆ ಆಲಮಟ್ಟಿ ಪೆಟ್ರೋಲ್ ಪಂಪ್ ನಿಂದ ರಾಕ್ ಉದ್ಯಾನಕ್ಕೆ ತೆರಳುತ್ತಿದ್ದ ಯುವತಿಯರ ಗುಂಪಿಗೆ ಚುಡಾಯಿಸಿದ್ದಾರೆ. ಆ ರೀತಿ ಮಾಡದಂತೆ ಅಭಿಲಾಷ ಸೇರಿದಂತೆ ಕೆಲವರು ತರಾಟೆಗೆ ತೆಗೆದುಕೊಂಡಿದ್ದಾರೆ.

ಇದರಿಂದ ಕುಪಿತಗೊಂಡ ಯುವಕರು ಮತ್ತು ಇವರ ಮಧ್ಯೆ ವಾಗ್ಯುದ್ಧ ನಡೆದಿದೆ.

ಸಂಜೆ ಆರೋಪಿಗಳು ಮರಳಿ ಆಗಮಿಸಿ ಆಲಮಟ್ಟಿ ಪೆಟ್ರೋಲ್ ಪಂಪ್ ಬಳಿ ಇರುವ ಪ್ರವೇಶ ದ್ವಾರದ ಬಳಿ ಕುಳಿತಿದ್ದ ಅಭಿಷೇಕ ಕಾಳೆ ಗೆ ನಾಲ್ವರು ಸೇರಿ ಜಾತಿ ನಿಂದನೆ ಮಾಡಿ ಹೊಟ್ಟೆ ಮತ್ತೀತರ ಕಡೆ ಚಾಕು ಹಾಕಿದ್ದಾರೆ ಎಂದು ಗುರುವಾರ ಈ ಪ್ರಕರಣದ ತನಿಖೆಗೆ ಆಗಮಿಸಿದ್ದ ವಿಜಯಪುರ ಡಿವೈಎಸ್ಪಿ ಜಿ.ಎಚ್. ತಳಕಟ್ಟಿ ತಿಳಿಸಿದರು.

ಈ ಕುರಿತು ಆರೋಪಿಗಳಾದ ದೀಪಕ ಲಕ್ಷ್ಮಣ ರಾಠೋಡ, ಕಾರ್ತಿಕ ಮಂಜುನಾಥ ಪೇಟೇಕರ, ಮನೋಜ ಮುತ್ತಣ್ಣ ದೊಡಮನಿ, ಕಿಶೋರ ರಮೇಶ ರಾಠೋಡ ಅವರನ್ನು ಬಂಧಿಸಲಾಗಿದ್ದು ಅವರ ವಿರುದ್ಧ ಕೊಲೆ ಆರೋಪ ಹಾಗೂ ಜಾತಿ ನಿಂದನೆ ಪ್ರಕರಣ ಆಲಮಟ್ಟಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

### ವಚನ ಚಿಂತನ 250



ಕರಸ್ಥಲದ ಜ್ಯೋತಿ

*ಕರಸ್ಥಲದ ಜ್ಯೋತಿಯಿದು,*
*ಕುರುಹವಿದು, ಎರಕವಿದು,*
*ಇದರ ನೆಲೆಯ ತಿಳಿದಡೆ ನಿಜಾನಂದವು,*
*ಹೊಲಬುದೋರದಿಹ ನಿಸ್ಸೀಮನ ಹೊಲಬನರಿದು*
*ಕೂಡಿದಾತನೆ ಮೃಡನು ಕಾಣಾ ರಾಮನಾಥಾ.*
*– ಜೇಡರ ದಾಸಿಮಯ್ಯನವರು*

ಅತ್ತಲಿತ್ತ ಹರಿವ ನಮ್ಮ ಮನಸ್ಸನ್ನು ಇಷ್ಟಲಿಂಗದಲ್ಲಿ ನೆಲೆಸಿದರೆ ಅಲ್ಲಿ ನಮಗೆ ಆ ಬೆಳಗು, ಬಯಲು, ಮಹಾ ಘನವೆಂದು ಕರೆಯುವ ಅನುಭಾವವು ದೊರೆಯುತ್ತದೆ. ನಮ್ಮ ಅಂಗೈಯಲ್ಲಿನ ಲಿಂಗದಲ್ಲಿ ಉಂಟಾಗುವ ಜ್ಯೋತಿಯನ್ನು ಕಾಣುವಲ್ಲಿ ಇರುವ ಒಂದೇ ವಿಧಾನವನ್ನು ಅಂದಿನ ಎಲ್ಲ ಶರಣರು ಅನುಸರಿಸಿದ್ದರು. ಆದ್ಯ ವಚನಕಾರ ಜೇಡರ ದಾಸಿಮಯ್ಯನವರು ಸಹ ಕರಸ್ಥಲದ ಲಿಂಗವನ್ನು ಜ್ಯೋತಿ ಎಂದು ಬಣ್ಣಿಸಿದ್ದಾರೆ. ದೇವರು ಎನ್ನುವ ಪದವು ಸಂಸ್ಕೃದ ದೀವ ಎಂಬ ಪದದಿಂದ ಉತ್ಪತ್ತಿಯಾಗಿದೆ, ದೇವ ಎಂದರೆ ಬೆಳಕು/ದೀಪ. ಹಾಗಾಗಿ ದೇವರ ನೈಜಸ್ವರೂಪವನ್ನು ನಮ್ಮ ಶರಣರು ಲಿಂಗದಲ್ಲಿ ಅಂದು ಕಂಡಿದ್ದರು.

ಶರಣ/ಮೃಡ ಎಂಬ ಪದದ ಅರ್ಥವನ್ನು ತಿಳಿಸುತ್ತಾ ಕರಸ್ಥಲದ ಜ್ಯೋತಿಯನ್ನು ಕಂಡು ಅದರೊಂದಿಗೆ ಕೂಡುವ(ಬೆರೆಯುವ)ವಿಧವನ್ನು ಯಾರು ಅನುಸರಿಸುತ್ತಾರೆ ಅವರು ಮಾತ್ರ ಈ ಜನ್ಮದ ನಿಜ ಆನಂದವನ್ನು(ಅನುಭಾವವನ್ನು) ಪಡೆಯುತ್ತಾರೆ ಎಂದಿದ್ದಾರೆ. ಇಷ್ಟಲಿಂಗವೆನ್ನುವುದು ಬ್ರಹ್ಮಾಂಡದ ಕುರುಹು. ವಿಜ್ಞಾನಿಗಳ ಸಂಶೋಧನೆಯಂತೆ ಈ ಬ್ರಹ್ಮಾಂಡವು ಧೀರ್ಘವೃತ್ತಾಕಾರದಲ್ಲಿದೆ. ಈ ಧೀರ್ಘವೃತ್ತಾಕಾರದ ಅರ್ಧಭಾಗವೇ ಇಷ್ಟಲಿಂಗವಾಗಿರುವುದು ಆ ಕಾರಣ ಇದನ್ನು ಕುರುಹವಿದು, ಎರಕವಿದು, ಎಂದಿರುವುದು. ಜೊತೆಗೆ ಬ್ರಹ್ಮಾಂಡದ ಚಾಲನಾ ಶಕ್ತಿಯಾದ ಮಹಾಲಿಂಗದ ಪ್ರತೀಕವಾದ ಇಷ್ಟಲಿಂಗವು ಅದೇ ಚೈತನ್ಯವನ್ನು ಹೊಂದಿದೆ ಎಂದು ಅರಿಯುದೇ ನಿಜಾನಂದ(ಇದರ ನೆಲೆಯ ತಿಳಿದಡೆ ನಿಜಾನಂದವು) ನಮ್ಮೆಲ್ಲರ ಕರಸ್ಥಲದಲ್ಲಿನ ಲಿಂಗವು ಆ ಚೈತನ್ಯವನ್ನು ನಮಗೆ ನೀಡಲಿ ಆ ನಿಟ್ಟಿನಲ್ಲಿ ನಮ್ಮ ಜೀವನಪಥ ಸಾಗಲಿ ನಮ್ಮೆಲ್ಲರ ಬಾಳು ಸಾರ್ಥಕತೆಹೊಂದಲಿ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

### ಮೌಲ್ವಿ ತನ್ವೀರ್ ಪೀರಾ ಅವರಿಗೆ ಐಸಿಸ್ ಜೊತೆ ಸಂಪರ್ಕ ಆರೋಪ | ಕಾಂಗ್ರೆಸ್ ಮುಖಂಡರಿಂದ ಸುದ್ದಿಗೋಷ್ಠಿ

# ಶಾಸಕ ಯತ್ನಾಳ ಆರೋಪ ಸಾಬೀತು ಮಾಡದಿದ್ದರೆ ರಾಜಕೀಯ ನಿವೃತ್ತಿಗೆ ಆಗ್ರಹ

ಉದಯರಶ್ಮಿ ನ್ಯೂಸ್

ವಿಜಯಪುರ: ನಗರದ ಮುಸ್ಲಿಂ ಧರ್ಮಗುರು ತನ್ವೀರ್ ಪೀರಾ ಹಾಸ್ಮಿ ಅವರಿಗೆ ಐಸಿಸ್ ಉಗ್ರ ಸಂಘಟನೆಯೊದಿಗೆ ಸಂಪರ್ಕ ಇದೆ ಎಂದು ಗಂಭೀರ ಆರೋಪ ಮಾಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಅದನ್ನು ಸಾಬೀತು ಮಾಡದಿದ್ದರೆ ರಾಜಕೀಯ ನಿವೃತ್ತಿ ಪಡೆಯಬೇಕು ಎಂದು ಕಾಂಗ್ರೆಸ್ ಮುಖಂಡ ಎಸ್.ಎಂ.ಪಾಟೀಲ ಗಣಿಯಾರ ಆಗ್ರಹಿಸಿದ್ದಾರೆ.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಿದ್ದರಾಮಯ್ಯ ಎಲ್ಲ ಸಮುದಾಯಗಳ ಮುಖ್ಯಮಂತ್ರಿ, ಹುಬ್ಬಳ್ಳಿಯಲ್ಲಿ ನಡೆದಿರುವ ಮೌಲ್ವಿಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಅಲ್ಲಿ ಮೌಲ್ವಿ ತನ್ವೀರ್ ಪೀರಾ ಹಾಸ್ಮಿ ಅವರ ಜೊತೆ ವೇದಿಕೆ ಹಂಚಿಕೊಂಡಿದ್ದಾರೆ. ಅದರಲ್ಲಿ ತಪ್ಪೇನಿದೆ. ಒಬ್ಬ ಧರ್ಮ ಗುರು, ಮೌಲ್ವಿಗಳನ್ನು ಉಗ್ರ ಸಂಘಟನೆಯೊಂದಿಗೆ ಹೋಲಿಕೆ ಮಾಡಿ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿರುವ ಯತ್ನಾಳ ಅವರು ತಮ್ಮ ಬಳಿ ಯಾವುದಾದರೂ ದಾಖಲೆಗಳಿದ್ದರೆ, ಆರೋಪವನ್ನು ಸಾಬೀತು ಮಾಡಿದರೆ ನಾನು ದೇಶವನ್ನು ಬಿಡುತ್ತೇನೆ ಎಂದು ತನ್ವೀರ್ ಪೀರಾ ಹಾಸ್ಮಿ ಅವರು ವಿದೇಶದಿಂದಲೇ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಕಾರಣ ಶಾಸಕರು ಸಾಬೀತು ಮಾಡಬೇಕು ಇಲ್ಲವೇ ರಾಜಕೀಯ ನಿವೃತ್ತಿ ಹೊಂದಬೇಕೆಂದು ಆಗ್ರಹಿಸಿದರು.



ತನ್ವೀರ ಫೀರಾ ಧರ್ಮ ಗುರು ಅವರು, ಸಿದ್ದೇಶ್ವರ ಸ್ವಾಮೀಜಿ, ಪೇಜಾವರ ಸ್ವಾಮೀಜಿ, ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರೊಂದಿಗೂ ವೇದಿಕೆ ಹಂಚಿಕೊಂಡಾಗ ಶಾಸಕರು ಉಗ್ರರ ನಂಟಿನ ಬಗ್ಗೆ ಮಾತಾಡಿಲ್ಲ. ಶಾಂತಿ ಸೌಹಾರ್ಧತೆಯಿಂದ ನೆಲೆಸಿರುವ ವಿಜಯಪುರದಲ್ಲಿ ಜಾತಿ-ಜಾತಿಗಳ ಮಧ್ಯ ಕೋಮು ಗಲಭೆ ಸೃಷ್ಟಿಸಲು ಕುಮ್ಮಕ್ಕು ನೀಡುವ ಹೇಳಿಕೆಗಳನ್ನು ನೀಡುತ್ತಿರುವುದು ಖಂಡನೀಯ ಎಂದರು.

ಅಹಿಂದ ಮುಖಂಡ ಸೋಮನಾಥ ಕಳ್ಳಿಮನಿ ಮಾತನಾಡಿ, ಶಾಸಕ ಯತ್ನಾಳ ಅವರು ಮುಸ್ಲಿಂರ ಬಗ್ಗೆ ಮಾತನಾಡಿ ದೇಶ ಭಕ್ತ ಎಂದು ಬಿಂಬಿಸಿಕೊಳ್ಳಲು ಹೊರಟಿದ್ದಾರೆ. ತಮ್ಮ ಸ್ವಾರ್ಥ ರಾಜಕಾರಣಕ್ಕಾಗಿ ಮುಸ್ಲಿಂರ ಮೇಲೆ ಆರೋಪ ಮಾಡುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕು. ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಿದೆ, ಮೊದಲು ಅವರು ಅವುಗಳತ್ತ ಗಮನ ಹರಿಸಲಿ ಎಂದು ಕುಟುಕಿದರು.

ಮುಖಂಡರಾದ ಫಯಾಜ ಕಲಾದಗಿ, ನಾಗರಾಜ ಲಂಬು, ಎಂ.ಸಿ.ಮುಲ್ಲಾ ಸೇರಿದಂತೆ ಹಲವರಿದ್ದರು.

# ನಗರ ಸ್ಥಳೀಯ ಸಂಸ್ಥೆಗಳ ಉಪ ಚುನಾವಣೆ: ವೇಳಾಪಟ್ಟಿ ನಿಗದಿ

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲೆಯ ಅವಧಿ ಮುಕ್ತಾಯವಾಗಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಸಾರ್ವತ್ರಿಕ ಚುನಾವಣೆ ಹಾಗೂ ಉಪ ಚುನಾವಣೆ ನಡೆಸಲು ಚುನಾವಣಾ ಆಯೋಗದಿಂದ ವೇಳಾಪಟ್ಟಿಯನ್ನು ನಿಗದಿಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ತಿಳಿಸಿದ್ದಾರೆ.

ಜಿಲ್ಲೆಯ ಚಡಚಣ ಪಟ್ಟಣ ಪಂಚಾಯತಿಗೆ ಸಾರ್ವತ್ರಿಕೆ ಚುನಾವಣೆ ಹಾಗೂ ಮುದ್ದೇಬಿಹಾಳ ಪುರಸಭೆಯ ವಾರ್ಡ ನಂ.18 ಮತ್ತು ಮನಗೂಳಿ ಪಟ್ಟಣ ಪಂಚಾಯತಿಯ ವಾರ್ಡ ನಂ.7ಕ್ಕೆ ಉಪ ಚುನಾವಣೆ ನಡೆಸಲು ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿದೆ.



ವೇಳಾಪಟ್ಟಿಯಂತೆ ಡಿ.8ರಂದು ಚುನಾವಣಾ ಅಧಿಸೂಚನೆ ಹೊರಡಿಸುವುದು, ನಾಮಪತ್ರಗಳನ್ನು ಸಲ್ಲಿಸಲು ಡಿ.15 ಕೊನೆಯ ದಿನಾಂಕ, ಉಮೇದುವಾರಿಕೆಗಳನ್ನು ಹಿಂತೆಗದುಕೊಳ್ಳಲು ಡಿ.18 ಕೊನೆಯ ದಿನಾಂಕ, ಅವಶ್ಯಕವಿದ್ದರೆ ದಿನಾಂಕ : 27-12-2023 ರಂದು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ಮತದಾನ ಮತ್ತು ಮರು ಮತದಾನ ಅವಶ್ಯವಿದ್ದಲ್ಲಿ ತಾಲೂಕಿನ ಕೇಂದ್ರ ಸ್ಥಳದಲ್ಲಿ ಡಿ.30ರಂದು ಬೆಳಿಗ್ಗೆ 8 ಗಂಟೆಯಿಂದ ಮರು ಮತದಾನ ಹಾಗೂ ಡಿ.30 ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನವಾಗಿದೆ.

ಚಡಚಣ ಪಟ್ಟಣ ಪಂಚಾಯತಿ ಸಾರ್ವತ್ರಿಕ ಚುನಾವಣೆಗೆ ವಾರ್ಡ ನಂ.1ಕ್ಕೆ ಪರಿಶಿಷ್ಟ ಪಂಗಡ, ವಾರ್ಡ ನಂ.2 ಹಿಂದುಳಿದ ವರ್ಗ-ಎ(ಮಹಿಳೆ), ವಾರ್ಡ ನಂ.3 ಸಾಮಾನ್ಯ, ವಾರ್ಡ ನಂ.4 ಹಿಂದುಳಿದ ವರ್ಗ-ಬಿ, ವಾರ್ಡ ನಂ.5 ಹಿಂದುಳಿದ ವರ್ಗ-ಎ, ವಾರ್ಡ ನಂ.6 ಸಾಮಾನ್ಯ, ವಾರ್ಡ ನಂ.7 ಪರಿಶಿಷ್ಟ ಜಾತಿ (ಮಹಿಳೆ), ವಾರ್ಡ ನಂ.8 ಸಾಮಾನ್ಯ (ಮಹಿಳೆ), ವಾರ್ಡ ನಂ.9 ಸಾಮಾನ್ಯ, ವಾರ್ಡ ನಂ.10 ಪರಿಶಿಷ್ಟ ಜಾತಿ, ವಾರ್ಡ ನಂ.11 ಸಾಮಾನ್ಯ, ವಾರ್ಡ ನಂ.12 ಹಿಂದುಳಿದ ವರ್ಗ-ಎ, ವಾರ್ಡ ನಂ.13 ಸಾಮಾನ್ಯ (ಮಹಿಳೆ), ವಾರ್ಡ ನಂ.14 ಸಾಮಾನ್ಯ (ಮಹಿಳೆ), ವಾರ್ಡ ನಂ.15 ಪರಿಶಿಷ್ಟ ಜಾತಿ ಹಾಗೂ ವಾರ್ಡ ನಂ.16 ಸಾಮಾನ್ಯ (ಮಹಿಳೆ)ಗೆ ಮೀಸಲಿರಿಸಲಾಗಿದೆ.

ಉಪ ಚುನಾವಣೆ ಜರುಗುವ ಬಸವನಬಾಗೇವಾಡಿ ತಾಲೂಕಿನ ಮನಗೂಳಿ ಪಟ್ಟಣ ಪಂಚಾಯತಿಯ ವಾರ್ಡ 7ರಕ್ಕೆ ಸಾಮಾನ್ಯ ಹಾಗೂ ಮುದ್ದೇಬಿಹಾಳ ತಾಲೂಕಿನ ಮುದ್ದೇಬಿಹಾಳ ಪುರಸಭೆ ವಾರ್ಡ ನಂ.18 ಸಾಮಾನ್ಯ ವರ್ಗಕ್ಕೆ ಮೀಸಲಿರಿಸಲಾಗಿದೆ.

ಚಡಚಣ ಪಟ್ಟಣ ಪಂಚಾಯತಿಯ 16 ವಾರ್ಡಗಳಿಗೆ ಜರುಗುವ ಸಾರ್ವತ್ರಿಕ ಚುನಾವಣೆಗೆ 16 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ ಹಾಗೂ ಉಪ ಚುನಾವಣೆಗೆ ವಾರ್ಡಿಗೆ ಒಂದರಂತೆ ಒಂದೊಂದು ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಸದಾಚಾರ ಸಂಹಿತೆಯು ದಿನಾಂಕ : 08-12-2023 ರಿಂದ ದಿನಾಂಕ : 30-12-2023ರವರೆಗೆ ಸಾರ್ವತ್ರಿಕ ಚುನಾವಣೆ ನಡೆಯುವ ಚಡಚಣ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಹಾಗೂ ಉಪ ಚುನಾವಣೆಗಳು ನಡೆಯುವ ಮನಗೂಳಿ ಪಟ್ಟಣ ಪಂಚಾಯತ್‌ನ ವಾರ್ಡ ನಂ.07 ಹಾಗೂ ಮುದ್ದೇಬಿಹಾಳ ಪುರಸಭೆಯ ವಾರ್ಡ ನಂ.18ರ ವ್ಯಾಪ್ತಿಯಲ್ಲಿ ಮಾತ್ರ ಜಾರಿಯಲ್ಲಿರುತ್ತದೆ. ಸದಾಚಾರ ಸಂಹಿತೆಯು ಉಲ್ಲಂಘನೆಯಾಗದಂತೆ ನಿಗಾ ವಹಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗೀತಾರಾಧನೆಯ ಎರಡನೇ ದಿನದ ಕಾರ್ಯಕ್ರಮ ಇಂದು

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ, ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ ಶಿರಸಿ ಮತ್ತು ಜ್ಞಾನ ಭಾರತಿ ವಿದ್ಯಾ ಮಂದಿರ ಸಮೂಹ ಶಿಕ್ಷಣ ಸಂಸ್ಥೆ ಇವರ ಸಹಯೋಗದಲ್ಲಿ ನಡೆಯುತ್ತಿರುವ ತಾಲೂಕು ಮಟ್ಟದ ಭಗವದ್ಗೀತಾ ಅಭಿಯಾನ–ಕರ್ನಾಟಕ–2023 ಸಪ್ತಾಹದ 2ನೇ ದಿನದ ಪಠಣ ಮತ್ತು ಉಪನ್ಯಾಸ ಕಾರ್ಯಕ್ರಮವನ್ನು ಡಿ.8 ಶುಕ್ರವಾರ ಸಂಜೆ 5.30 ಗಂಟೆಗೆ ಪಟ್ಟಣದ ಪಿ.ಕೆ.ನಗರದ ಜ್ಞಾನ ಭಾರತಿ ವಿದ್ಯಾ ಮಂದಿರದಲ್ಲಿ ನಡೆಯಲಿದೆ. ಸಾರ್ಥಕ ಜೀವನಕ್ಕೆ ಭಗವದ್ಗೀತೆ ಎನ್ನುವ ವಿಷಯದ ಮೇಲೆ ಶಿಕ್ಷಣ ಸಂಯೋಜಕಿ ವಿಜಯಲಕ್ಷ್ಮೀ ಚಿಲ್ಲಾಳಶೆಟ್ಟಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಶಾಲಾ ಮಾತೆಯವರು ಸೇರಿ ಕಾರ್ತಿಕ ದೀಪೋತ್ಸವ ನಡೆಸಿಕೊಡಲಿದ್ದಾರೆ.

ಕಾರ್ಯಕ್ರಮ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಬಿ.ಪಿ.ಕುಲಕರ್ಣಿ ವಹಿಸಿಕೊಳ್ಳಲಿದ್ದು, ಮುಖ್ಯ ಅತಿಥಿ–ಯಾಗಿ ಪುಸಭೆಯ ನಾಮನಿರ್ದೇಶಕ ಸದಸ್ಯರಾದ ರಾಜಶೇಖರ ಹೊಳಿ ಹಾಗೂ ಸಂಸ್ಥೆಯ ನಿರ್ದೇಶಕಿ ಲೀಲಾ ಭಟ್ಟ, ಆಡಳಿತಾಧಿಕಾರಿ ಶಾಂತಾ ಭಟ್ಟ ಸೇರಿದಂತೆ ಇತರರು ಉಪಸ್ಥಿತ–ರಿರಲಿದ್ದಾರೆ ಎಂದು ಅಭಿಯಾನದ ಸಂಚಾಲಕ ರಾಮಚಂದ್ರ ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**2000ಕಿ.ಮೀ ದೂರ । 55 ದಿನಗಳ ಪಯಣ । ಸತತ 45 ವರ್ಷಗಳಿಂದ ಮಾಲೆಧಾರಣೆ । 24 ವರ್ಷದಿಂದ ಪಾದಯಾತ್ರೆ**

# ಮುಂಬೈನಿಂದ ಶಬರಿಮಲೆಗೆ ಉಪೇಂದ್ರಸ್ವಾಮಿ ಪಾದಯಾತ್ರೆ

**ಉದಯರಶ್ಮಿ ನ್ಯೂಸ್**

ಸಿಂದಗಿ: ನಿರಂತರವಾಗಿ 24 ವರ್ಷಗಳಿಂದ ಸುಮಾರು 2000ಕಿ.ಮೀ 55 ದಿನಗಳವರೆಗೆ ಬರಿಗಾಲಿನಲ್ಲಿ ಪಾದಯಾತ್ರೆಯ ಮೂಲಕ ಶಬ–ರಿಮಲೆಯ ಅಯ್ಯಪ್ಪ ಸ್ವಾಮಿಯ ದರುಶನ ಪಡೆಯುವ ಭಕ್ತರೊಬ್ಬರು ಸಿಂದಗಿ ನಗರಕ್ಕೆ ಗುರುವಾರ ಆಗಮಿಸಿದ್ದರು.



ಅವರನ್ನು ಪಟ್ಟಣದ ಎಪಿಎಂಸಿ ಯಾರ್ಡಿನ್ ಧರ್ಮಶಾಸ್ತಾ ಸನ್ನಿಧಾನಂನ ಅಯ್ಯಪ್ಪಸ್ವಾಮಿ ಮಾಲಾಧಾರಿ ಕಿರಣ ಶಿವಸಿಂಪಿ ಗುರುಸ್ವಾಮಿ ಹಾಗೂ ವ್ರತಧಾರಿಗಳು ಅವರನ್ನು ಸ್ವಾಗತಿಸಿ, ಭಕ್ತಿಪೂರ್ವಕವಾಗಿ ಬೀಳ್ಕೊಟ್ಟರು.

ಉಪೇಂದ್ರಸ್ವಾಮಿ ಪೂಜಾರಿ ಎಂಬುವವರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಸರಪಾಡಿ ಗ್ರಾಮದ ನಿವಾಸಿ. ಇವರೇ ಈ ಯಾತ್ರೆಯ ಭಕ್ತರು. ಹಲವು ವರ್ಷಗಳ ಹಿಂದಯೇ ಜೀವನೋಪಾಯಕ್ಕಾಗಿ ಉದ್ಯೋಗವನ್ನು ಅರಸಿಕೊಂಡು ದೂರದ ಮುಂಬೈ ಪಟ್ಟಣಕ್ಕೆ ತೆರಳಿದ್ದರು. 1989ರಲ್ಲಿ ಮುಂಬೈನಲ್ಲಿ ಯಾರೋ ಶಬರಿಮಲೆ ಸ್ವಾಮಿ ಅಯ್ಯಪ್ಪನ ವ್ರತ ಆಚರಣೆ ಮಾಡು, ಮಾಲೆ ಧರಿಸು ಎಂದು ಹೇಳಿದ್ದಕ್ಕಾಗಿ ಭಕ್ತಿಯಿಂದ ಮಾಲೆ ಧರಿಸಿ ಸು.3–4 ವರ್ಷಗಳವರೆಗೆ ಶಬರಿಗೆ ಹೋಗಿ ಬಂದಿದ್ದರು. 45 ವರ್ಷಗಳಿಂದ ಅಯ್ಯಪ್ಪ ಸ್ವಾಮಿಯ ಮಾಲೆಯನ್ನು ಧರಿಸುತ್ತಲೇ ಬಂದಿದ್ದಾರೆ. ಇವರು ಶಬರಿಮಲೆಗೆ ಕಾಲ್ನಡಿಗೆಯ ಮುಖಾಂತರ ಬರುತ್ತೇನೆ ಎಂದು 1993ರಲ್ಲಿ ಹರಕೆಯನ್ನು ಹೋರುತ್ತಾರಂತೆ, ಅಂದಿನಿಂದ 1999ರಿಂದ ಈ ಅಯ್ಯಪ್ಪನ ಭಕ್ತ ಸತತವಾಗಿ ಪಾದಯಾತ್ರೆ ಮಾಡುತ್ತಿದ್ದು, ಪ್ರಸ್ತುತ 24 ವರ್ಷಗಳಾಯಿತು. ಪ್ರತಿಬಾರಿಯೂ ಬರಿಗಾಲಿನಲ್ಲಿ ಮುಂಬೈನಿಂದ ಪ್ರಾರಂಭವಾಗುವ ಪಾದಯಾತ್ರೆಯು ಕರ್ನಾಟಕ, ಆಂಧ್ರ, ತಮಿಳುನಾಡು ಮುಖಾಂತರ ಕೇರಳದ ಶಬರಿಮಲೆಗೆ ಜನವರಿ ತಿಂಗಳ ಮಕರ ಸಂಕ್ರಮಣದಂದು ಕೊನೆಗೊಳ್ಳುತ್ತದೆ.

ಸ್ಫೂರ್ತಿ ನೀಡುತ್ತಿರುವ ಪಾದಯಾತ್ರೆ

ವಾಹನ ಸೌಲಭ್ಯಗಳಿಲ್ಲದ ಕಾಡು, ಪರ್ವತ, ಸರಿಯಾಗಿಲ್ಲದ ರಸ್ತೆ ಹಾಗೂ ತಗ್ಗು ದಿನ್ನೆಗಳ ಮದ್ಯೆದಲ್ಲಿ ಬರಿಗಾಲಿನಲ್ಲಿ ಪಾದಯಾತ್ರೆ ಮಾಡುವ ಈ ಭಕ್ತ ಹಲವಾರು ನಗರಗಳನ್ನು ಪ್ರವೇಶ ಮಾಡುತ್ತಿದ್ದಂತೆ ಆ ಪ್ರದೇಶದ ಅಯ್ಯಪ್ಪಸ್ವಾಮಿ ವ್ರತಧಾ–ರಿಗಳು ಭಕ್ತಿಭಾವದಿಂದ ಸ್ವಾಗತಿಸಿ, ಪ್ರಸಾದವನ್ನುಣಿಸಿ ತುಂಬು ಹೃದಯದಿಂದ ಬೀಳ್ಕೊಡುತ್ತಾರೆ. ವರ್ಷದಿಂದ ವರ್ಷಕ್ಕೆ ಇವರಿಗೆ ಹಲವಾರು ಅಯ್ಯಪ್ಪಸ್ವಾಮಿ ವ್ರತಧಾ–ರಿಗಳು ಸ್ಫೂರ್ತಿ ನೀಡುತ್ತಿದ್ದಾರೆ.

ಸಿಂದಗಿ ತಾಲೂಕಿನ ಕೆರೂಟಗಿ ಗ್ರಾಮದ ಅರುಣಕುಮಾರ ಬಿರಾದಾರ ಎನ್ನುವ ವ್ರತಧಾರಿ ಎರಡನೆಯ ಬಾರಿ ಹಾಗೂ ಮೊದಲ ಬಾರಿಗೆ ಮುಂಬೈಯಿಂದ ಅವರ ಜೊತೆಯಾಗಿ ಪಾಂಡು ತಿಮ್ಮಪ್ಪ ಶೆಟ್ಟಿ ಇವರ ಪಾದಯಾತ್ರೆ ಸ್ಫೂರ್ತಿಯಾಗಿದ್ದು, ಉಪೇಂದ್ರಸ್ವಾಮಿ ಅವರೊಂದಿಗೆ ಪಾದಯಾತ್ರೆಯಲ್ಲಿ ಭಾಗವಹಿಸಿದ್ದಾರೆ.

ನಗರವನ್ನು ಪ್ರವೇಶಿಸಿದ ಉಪೇಂದ್ರ ಸ್ವಾಮಿಯನ್ನು ಪಟ್ಟಣದ ಎಪಿಎಂಸಿ ಯಾರ್ಡಿನ ರೈತಭವನದಲ್ಲಿರುವ ಶ್ರೀ ಧರ್ಮಶಾಸ್ತಾ ಸನ್ನಿಧಾನಂ ಮಾಲಾಧಾರಿಗಳು ಕಿರಣ ಶಿವಸಿಂಪಿ ಗುರುಸ್ವಾಮಿಗಳು, ಆನಂದ ಮಲ್ಲೇದ, ಬಸವರಾಜ ನಾವಿ, ಪ್ರವೀಣ, ಅರವಿಂದ ವಸ್ತ್ರದ, ಹಣಮಂತ ಕುಂಬಾರ, ರಾಜು ಬಡಿಗೇರ, ರಾಜು ಉಪ್ಪಿನ, ಶಾಂತೂ ಬಿರಾದಾರ, ಶಿವಾನಂದ ಪರಸಪ್ಪಗೋಳ, ರಾಘವೇಂದ್ರ ಕುಂಬಾರ ಗುರುಸ್ವಾಮಿಗಳ ನೇತೃತ್ವದಲ್ಲಿನ ತಂಡದ ವ್ರತಧಾ–ರಿಗಳು ಭಕ್ತಿಯಿಂದ ಸ್ವಾಗತಿಸಿ ನಗರದ ಪ್ರಮುಖ ರಸ್ತೆಗಳ ಮೂಲಕ ಭಕ್ತಿಯಿಂದ ಅಯ್ಯಪ್ಪಸ್ವಾಮಿಯ ಜಯಘೋಷದೊಂದಿಗೆ ಮುಂದಿನ ಪಯಣಕ್ಕೆ ಬೀಳ್ಕೊಟ್ಟರು.



"ನನ್ನ ಯಾತ್ರೆ ಪ್ರಾರಂಭಿಸುವ ಮುನ್ನ ನಲ್ಲೂರ ರಘುವೀರ್ ಶೆಟ್ಟಿ ಹಾಗೂ ಕಡಂದಲೆ ಸರೇಶ್ ಭಂಡಾರಿ ಅವರನ್ನು ಸ್ಮರಿಸುತ್ತೇನೆ, ಕಾರಣ ನನ್ನ ಈ ಯಾತ್ರೆಗೆ ಈ ಈರ್ವರೂ ಮಹನೀಯರ ಸಹಕಾರ ತುಂಬಾ ಇದೆ. ಸುಮಾರು 45 ವರ್ಷಗಳಿಂದ ಅಯ್ಯಪ್ಪ ಸ್ವಾಮಿ ಮಾಲೆಯನ್ನು ಧರಿಸುತ್ತಲಿರುವೆ. ಯಾವುದೇ ಆಸೆ, ಸಂಕಲ್ಪವನ್ನು ಇಟ್ಟುಕೊಳ್ಳದೇ ಆತ್ಮಶಾಂತಿಗಾಗಿ 24 ವರ್ಷದಿಂದ ಶಬರಿಮಲೆಗೆ ಪಾದಯಾತ್ರೆ ಹಮ್ಮಿಕೊಂಡಿರುವೆ. ಮಾರ್ಗ ಮಧ್ಯದಲ್ಲಿ ಯಾರಾದರೂ ಜೊತೆಯಾದರೆ ಅವರನ್ನು ಸೇರಿಕೊಂಡ 55ನೆಯ ದಿನಕ್ಕೆ ಮಕರ ಜ್ಯೋತಿಯ ದಿವಸ ತಲುಪುತ್ತೇನೆ. 25ವರ್ಷಗಳ ಪಾದಯಾತ್ರೆಯನ್ನು ಪೂರೈಸಬೇಕು ಎಂದುಕೊಂಡಿದ್ದೇನೆ.

–ಉಪೇಂದ್ರಸ್ವಾಮಿ ಪೂಜಾರಿ, ಶಬರಿಮಲೆ ಪಾದಯಾತ್ರಿ

# ಕಲೆಯ ಮೂಲಕ ಕಲಿಕೆ ಪ್ರಾತ್ಯಕ್ಷಿಕೆ ಕಾರ್ಯಕ್ರಮ

**ಉದಯರಶ್ಮಿ ನ್ಯೂಸ್**



ವಿಜಯಪುರ: ಕಲೆಯ ಮೂಲಕ ಕಲಿಕೆಯು ಮಕ್ಕಳಲ್ಲಿ ಸೃಜನಶೀಲತೆಯನ್ನು ಅನ್ವೇಷಿಸಲು ಮತ್ತು ಅವರ ಉತ್ತಮ ಕಲಿಕಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಇದು ಕಲಿಕೆಯ ಪ್ರೀತಿ ಮತ್ತು ಸಾಧನೆಯ ಪ್ರಜ್ಞೆಯನ್ನು ಸಹ ಬೆಳೆಸುತ್ತದೆ ಎಂದು ತುಮಕೂ–ರಿನ ಸಂಪನ್ಮೂಲ ವ್ಯಕ್ತಿ ರುದ್ರಸ್ವಾಮಿ ಹೇಳಿದರು.

ಅವರು ತಾಲೂಕಿನ ನಾಗಠಾಣ ಗ್ರಾಮದ ಶ್ರೀ ಮಲ್ಲಿಕಾರ್ಜುನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೂಜ್ಯಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಸ್ಮರಣಾರ್ಥ ಕಲೆಯ ಮೂಲಕ ಕಲಿಕೆ ವಿಶೇಷ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಇದು ಮಕ್ಕಳಲ್ಲಿ ವಿಭಿನ್ನ ಸಂಸ್ಕೃತಿಗಳನ್ನು ಅರ್ಥಮಾಡಿಕೊಂಡು ಪ್ರಶಂಸಿಸಲು ಸಹಕರಿಸುತ್ತದೆ. ವಿದ್ಯಾರ್ಥಿಗಳಲ್ಲಿ ಸಾಮಾಜಿಕ–ಭಾವನಾತ್ಮಕ ಬೆಳವಣಿಗೆಯನ್ನು ಉಂಟುಮಾಡುತ್ತದೆ ಎಂದು ಹೇಳಿದರು.

ಶಿಕ್ಷಕ ಸಾಹಿತಿ ಸಂತೋಷ ಬಂಡೆ ಮಾತನಾಡಿ, ಕಲೆಯ ಮೂಲಕ ಕಲಿಕೆಯು ಪ್ರಕೃತಿಯಲ್ಲಿ ಸಾವಯವವಾಗಿದ್ದು, ಶಾಲೆಗಳಲ್ಲಿ ಪ್ರೇರಕ ಕಲಿಕೆಯ ವಾತಾವರಣವನ್ನು ರಚಿಸಿ, ಶಿಕ್ಷಕರು ಮತ್ತು ಮಕ್ಕಳಲ್ಲಿ ಉತ್ತಮ ಶೈಕ್ಷಣಿಕ ಫಲಿತಾಂಶಗಳನ್ನು ತೋರಿಸುತ್ತದೆ ಎಂದು ಹೇಳಿದರು.

ಶಾಲಾ ಮುಖ್ಯ ಶಿಕ್ಷಕ ಸುರೇಶಗೌಡ ಬಿರಾದಾರ ಮಾತನಾಡಿ, ಕಲೆಯ ಮೂಲಕ ಕಲಿಕೆ ನಿರೀಕ್ಷಿತ ಫಲ ನೀಡಿದೆ. ಪಠ್ಯವಸ್ತುವಿನ ಕಲಿಕೆಯ ಜತೆಗೆ ಮಕ್ಕಳು ತಮ್ಮ ಆಸಕ್ತಿಯ ಕಲೆಗಳಲ್ಲಿ ಪಳಗಲು ಇದು ಅವಕಾಶ ಮಾಡಿಕೊಟ್ಟಿದೆ. ಇದೊಂದು ಉತ್ತಮ ಪ್ರಯೋಗವಾಗಿದೆ ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಶಂಕರ ಹುಣಶ್ಯಾಳ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯದರ್ಶಿ ಸುನಂದಾ ಹುಣಶ್ಯಾಳ, ಶಿಕ್ಷಕರಾದ ಎಂ ಎಸ್ ಪಾಪನಾಳಮಠ, ಭೀಮಾಶಂಕರ ಕೋರೆ, ಜಯಶ್ರೀ ಬಂಗಾರಿ, ಬಸಮ್ಮ ವಡಗೇರಿ, ಮಧುಮತಿ ನಿಕ್ಕಂ, ರೂಪಾ ಶಹಾಪುರ, ಸರೋಜಿನಿ ಕಟ್ಟಿಮನಿ, ರೇಣುಕಾ ಭಜಂತ್ರಿ, ಲಕ್ಷ್ಮೀ ಮೇತ್ರಿ, ವೀರೇಶ ಹುಣಶ್ಯಾಳ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವಿದ್ಯುತ್ ಕಳ್ಳತನ ಮಾಡಿದರೆ ಸೂಕ್ತ ಕ್ರಮ :ಕವಲಗಿ

**ಉದಯರಶ್ಮಿ ನ್ಯೂಸ್**



ಮೋರಟಗಿ: ವಿದ್ಯುತ್ ಕಳ್ಳತನ ಮಹಾ ಅಪರಾಧ ಎಂದು ಹಲವಾರು ಬಾರಿ ಗ್ರಾಮದಲ್ಲಿ ಡಂಗುರ ಸಾರುವ ಮೂಲಕ ಜಾಗ್ರತಿ ಮೂಡಿಸಿದರೂ ಕೂಡಾ ರಾತ್ರಿವೇಳೆ ನೇರವಾಗಿ ಎಲ್ ಟಿ ಲೈನ್ ಗೆ ಹುಕ್ಕು ಹಾಕುತ್ತಿರುವ ಮಾಹಿತಿಗಳು ಕೇಳಿ ಬರುತ್ತಿವೆ ವಿದ್ಯುತ್ ಕಳ್ಳತನ ಮಾಡುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಶಾಖಾಧಿಕಾರಿ ಆನಂದ ಕವಲಗಿ ಹೇಳಿದರು.

ಗುರುವಾರ ಸಮೀಪದ ನಾಗಾವಿ, ಗೊರವಗುಂಡಗಿ, ಕೆರೂರ, ಬಂಟನೂರ, ಗುತ್ತರಗಿ, ಗ್ರಾಮಗಳಲ್ಲಿ ವಿದ್ಯುತ್ ಬಾಕಿ ವಸೂಲಿ ಹಾಗೂ ಅನಧಿಕೃತ ವಿದ್ಯುತ್ ಕಾರ್ಯಾಚರಣೆಯಲ್ಲಿ ಹೀಟರ್, ವೈಯರ್, ವಶಪಡಿಸಿಕೊಂಡು ಅವರು ಮಾತನಾಡಿದರು.

ಇಂದಿನ ತಂತ್ರಜ್ಞಾನ ಯುಗದಲ್ಲಿ ವಿದ್ಯುತ್ ಬಹಳಷ್ಟು ಅವಶ್ಯಕತೆ ಇದ್ದು ಅದನ್ನು ಮಿತವಾಗಿ ಬಳಸಿ ಅವಶ್ಯಕತೆ ಮಾತ್ರ ಉಪಯೋಗಿಸಿ ಅನವಶ್ಯಕವಾಗಿ ಹಗಲಿನಲ್ಲಿ ಬಲ್ಬ ಬಳಸುವುದು ನಿಲ್ಲಿಸಿ ಮತ್ತು ನಿಗದಿ ಪಡಿಸಿರುವ ದಿನಾಂಕದಂದು ವಿದ್ಯುತ್ ಬಾಕಿ ಹಣ ಸಂದಾಯ ಮಾಡಬೇಕು. ಮೇನ್ ಲೈನ್ ಅಥವಾ ಎಲ್ ಟಿ ಲೈನ್ ತಂತಿಗಳ ಹತ್ತಿರ ಗಿಡ ಮರ ಬೆಳೆಯದ ಹಾಗೆ ನೋಡಿಕೊಳ್ಳಬೇಕು. ಹಾಗೇನಾದರೂ ಗಿಡ ಮರಗಳು ತಂತಿಗೆ ತಗಲುವ ಹಂತದಲ್ಲಿ ಇದ್ದರೆ ಕೂಡಲೇ ನಮ್ಮ ಸಿಬ್ಬಂದಿಗಳ ಗಮನಕ್ಕೆ ತರಬೇಕು. ಮತ್ತು ವೈಯರ್ ಮೆನ್ ಜೊತೆ ಸಹಕಾರದಿಂದ ನಡೆದುಕೊಳ್ಳಬೇಕು. ತಮ್ಮ ಮನೆಯ ಮುಂಭಾಗ ಇರುವ ವಿದ್ಯುತ್ ಕಂಬಗಳಿಗೆ ದನಕರುಗಳನ್ನು ಕಟ್ಟಬಾರದು. ಹಾಗೂ ನಿಮ್ಮ ಮಕ್ಕಳನ್ನು ಕಂಬದ ಅಕ್ಕ ಪಕ್ಕ ಆಟವಾಡಲು ಬಿಡಬಾರದು ಎಂದು ಸಲಹೆ ನೀಡಿದರು.

ಅನಧಿಕೃತವಾಗಿ ಬಳಸುತ್ತಿರುವ ಮನೆಗಳ ಪಂಪಸೆಟ್ ಗಳ ಹಾಗೂ ವಿದ್ಯುತ್ ಬಾಕಿ ಇರುವ ವಾಯರ್ ಗಳನ್ನು ವಶಪಡಿಸಿಕೊಂಡರು.

ವಿದ್ಯುತ್ ಕಾರ್ಯಾಚರಣೆಯಲ್ಲಿ ಪವರ್ ಮ್ಯಾನಗಳಾಡ ನಬಿ ಪಟೇಲ ಗರಗುಂಡಗಿ, ಗೌತಮ್ ಸಿಂಗ್ ಕಿಲ್ಲೆದಾರ್, ಆಶಿಫ್ ಮನಿಯಾರ. ದೇವಿಂದ್ರ ಮಾಡಿವಾಲ್ಕರ್, ನಝೀರ್ ಮೊಕಾಶಿ, ಮಲ್ಲು ದೇಸಾಯಿ, ಗುರು ಅಗಸರ, ಹಣಮಂತರಾಯ ಪಾಟಿಲ್ ಇದ್ದರು.

**ಮುದ್ದೇಬಿಹಾಳ ಕ್ರಿಕೆಟ್ ಪ್ರೀಮಿಯರ್ ಲೀಗ್ ಸೀಸನ್–6 ನಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಪ್ರಭುಗೌಡ ಅಭಿಮತ**

# ಮೊಬೈಲ್ ಹಾವಳಿಯಿಂದ ದೇಹ ದಂಡಿಸುವ ಕ್ರೀಡೆಗಳು ಕಣ್ಮರೆ

**ಉದಯರಶ್ಮಿ ನ್ಯೂಸ್**



ಮುದ್ದೇಬಿಹಾಳ: ಮೊಬೈಲ್ ನ ಹಾವಳಿಯಿಂದಾಗಿ ದೇಹವನ್ನು ದಂಡಿಸುವ ಕ್ರೀಡೆಗಳು ಕಣ್ಮರೆಯಾಗುತ್ತಿವೆ. ಕ್ರೀಡೆಗಳು ಕೇವಲ ಮನರಂಜನೆಗಾಗಿ ಅಲ್ಲ. ಮನರಂಜನೆಯ ಜೊತೆಗೆ ಆರೋಗ್ಯದ ಮೇಲೆ ಸಾಕಷ್ಟು ಉತ್ತಮ ಪ್ರಭಾವಗಳನ್ನು ಬೀರುತ್ತವೆ ಅನ್ನೋ ಸತ್ಯವನ್ನು ಈಗಿನ ಯುವಕರು ತಿಳಿದುಕೊಳ್ಳಬೇಕು ಎಂದು ಜಿಲ್ಲಾ ಪಂಚಾಯತ್ ನ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಹೇಳಿದರು.

ಪಟ್ಟಣದ ವಿಬಿಸಿ ಹೈಸ್ಕೂಲ್ ಮೈದಾನದಲ್ಲಿ ಕಳೆದ ಒಂದು ತಿಂಗಳಿನಿಂದ ನಡೆದ ಮುದ್ದೇಬಿಹಾಳ ಪ್ರೀಮಿಯರ್ ಲೀಗ್ ಸೀಜನ್–6 ಕ್ರಿಕೆಟ್ ಪಂದ್ಯಾವಳಿಯ ಕೊನೆಯ ಪಂದ್ಯದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಧ್ಯದ ಪರೀಸ್ಥಿತಿಯಲ್ಲಿ ಯಾವ ಯುವಕರನ್ನು ನೋಡಿದರೂ ಅವರ ಕೈಯಲ್ಲೊಂದು ದೊಡ್ಡ ಮೊಬೈಲ್ ಇರುತ್ತೆ. ಸಂಜೆಯಾದರೆ ಸಾಕು ಅಲ್ಲಲ್ಲಿ ಕುಳಿತು ಕಣ್ಣು ಮುಚ್ಚದೇ ಮೊಬೈಲ್ ನೋಡುತ್ತ ತಲೆ ಹೊರಳಾಡಿಸುತ್ತ ಕುಳಿತಿರುತ್ತಾರೆ. ಇದರಿಂದ ಕಣ್ಣುಗಳು ಮಾತ್ರವಲ್ಲದೇ ಮನಸ್ಸು ಕೂಡ ಹಾಳಾಗುತ್ತದೆ. ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುವಂತಹ ಆಟಗಳನ್ನು ಬಿಟ್ಟು ದೇಹವನ್ನು ದಂಡಿಸುವ ಆಟಗಳನ್ನಾಡಲು ಯುವಕರು ಮುಂದಾಗಬೇಕು ಎಂದರು.

ಈ ವೇಳೆ ಪಿಎಸ್ಐ ಸಂಜೀವ ತಿಪರೆಡ್ಡಿ ಮಾತನಾಡಿ, ಆಟದಲ್ಲಿ ಸೋಲು ಗೆಲುವು ಮುಖ್ಯವಲ್ಲ. ಮೊದಲು ಪಾಲ್ಗೊಳ್ಳುವದು ಮುಖ್ಯ. ಯಾವತ್ತೂ ಆಟವಾಡುವಾಗ ಗೊಂದಲಗಳನ್ನು ಮಾಡಿಕೊಳ್ಳಬಾರದು. ನಿರ್ಣಾಯಕರ ನಿರ್ಣಯಕ್ಕೆ ತಲೆ ಬಾಗುವವನೇ ನಿಜವಾದ ಆಟಗಾರ ಎಂದರು.

ಮೌಲಾನಾ ಅಲ್ಲಾಭಕ್ಷ ಖಾಜಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪಂದ್ಯಾವಳಿಗೆ ಪ್ರಥಮ ಬಹುಮಾನ ನೀಡಿ ಪ್ರೋತ್ಸಾಹಿಸಿದ ಸಮಾಜ ಸೇವಕ ಸಿ.ಬಿ.ಅಸ್ಕಿ ಅವರ ಅನುಪಸ್ಥಿತಿಯಲ್ಲಿ, ಅವರ ಸ್ನೇಹಿತ ಸಮಾಜ ಸೇವಕ ಎಂ.ಎನ್.ಮದರಿ ಅವರನ್ನು ಸಂಘಕರು ಸನ್ಮಾನಿಸಿ ಗೌರವಿಸಿದರು.

ದಿ–ಕರ್ನಾಟಕ ಕೋ ಅಪ್ ಬ್ಯಾಂಕ್ ಅಧ್ಯಕ್ಷ ಸತೀಶ ಓಸ್ವಾಲ್, ಪುರಸಭೆ ಸದಸ್ಯರಾದ ಮಹೆಬೂಬ ಗೊಳಸಂಗಿ ಮತ್ತು ಶಿವು ಶಿವಪೂರ, ಮಾಜಿ ಸದಸ್ಯ ಹಾಗೂ ಪಂದ್ಯಾವಳಿಯ ರೂವಾರಿ ಕಾಮರಾಜ ಬಿರಾದಾರ, ಸದಾಶಿವ ಮಠ, ಸಂಗಣ್ಣ ಮೇಲಿನಮನಿ, ಹ–ರೀಶ ಬೆವೂರ, ಯಾಸೀನ ಸೋತೆ, ಬಬಲು ಹುಣಚಗಿ ಸೇರಿದಂತೆ ಮತ್ತೀತರರು ಇದ್ದರು. ವೈ.ಎಚ್.ವಿ–ಜಯಕರ, ಹುಸೇನ ಮುಲ್ಲಾ ಕಾಳಗಿ ಕಾರ್ಯಕ್ರಮವನ್ನು ನಿರ್ವಹಿಸಿದರು.

ಅಂತಿಮ ಹಣಾಹಣಿಯಲ್ಲಿ ಜೈದ್ ವಾರಿಯರ್ಸ್ ಮತ್ತು ಅನಸ್ ಆಝಾದ್ ನಗರ ತಂಡಗಳು ಸೆಣಸಿದವು. ರೋಚಕ ಪಂದ್ಯದಲ್ಲಿ ಅಂತಿಮವಾಗಿ ಜೈದ್ ವಾ–ರಿಯರ್ಸ ತಂಡ 2ರನ್ ಗಳಿಂದ ಗೆದ್ದು ಬೀಗಿದರೆ, ಎದುರಾಳಿ ಅನಸ್ ಆಝಾದ್ ನಗರ ತಂಡ ಸೋತರೂ ಸೀಜನ್–6 ನ ರನ್ನರ್ ಅಪ್ ಆಗಿ ಗುರುತಿಸಿಕೊಂಡು ತೃಪ್ತಿಪಟ್ಟಿತು.

# ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗೆ ಶಿಕ್ಷಕರ ಸಂಘದ ಸ್ವಾಗತ



**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ತಾಲೂಕಿನ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಆಗಮಿಸಿದ ಬಸಪ್ಪ ಸಾವಳಗಿ ಅವರನ್ನು ಇಲ್ಲಿನ ಕಚೇರಿಯ ಸಿಬ್ಬಂದಿ, ಶಿಕ್ಷಕರ ಸಂಘಟನೆಯ ಪದಾಧಿಕಾರಿಗಳು ಪುಸ್ತಕ ನೀಡಿ ಬರಮಾಡಿಕೊಂಡರು.

ಈ ವೇಳೆ ಸರ್ಕಾರಿ ಪ್ರಾಥ–ಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಎಚ್.ಮುದ್ನೂರ, ಕಾರ್ಯದರ್ಶಿ ಎನ್.ಎಚ್.ತುಡಗಿ, ಉಪಾಧ್ಯಕ್ಷರುಗಳಾದ ಶಾಂತು ಬಿರಾದಾರ ಮತ್ತು ಶ್ರೀಮತಿ ಆರ್.ಎಸ್.ಹಿರೇಮಠ, ಬಿಇಓ ಪ್ರಭಾರ ವಹಿಸಿದ್ದ ಯು.ಬಿ.ಧರಿಕಾರ, ಇಸಿಓ ಸುರೇಶ ಹಿರೇಮಠ, ನೌಕರರ ಸಂಘದ ಕಾರ್ಯದರ್ಶಿ ಬಿ.ಎಸ್.ಹೊಳಿ, ಎ.ಎಚ್.ಖಾಜಿ, ಐ.ಎ.ಹಿರೇಮಠ, ಎಸ್.ಆರ್.ಪಾಟೀಲ, ಶಶಿಕಲಾ ಮೆರೆಖೋರ, ಜ್ಯೋತಿ ಕುಂದರಗಿ, ಶಾರದಾ ಚಿನಿವಾರ, ಮಹಾದೇವಿ ವಾಲಿ ಸೇರಿದಂತೆ ಮತ್ತೀತರರು ಇದ್ದರು.

# ಡಿ.8ರಂದು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಫೋನ್ ಇನ್ ಕಾರ್ಯಕ್ರಮ

**ಉದಯರಶ್ಮಿ ನ್ಯೂಸ್**

ವಿಜಯಪುರ: ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ ವಿಜ್ಞಾನ ವಿಷಯದ ಕುರಿತು ಡಿ.8 ರಂದು ಸಂಜೆ 6 ರಿಂದ 8 ಗಂಟೆವರೆಗೆ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಡಿಡಿಪಿಐ ಎನ್.ಎಚ್.ನಾಗೂರ ಅವರು ತಿಳಿಸಿದ್ದಾರೆ.

ಮಾರ್ಚ್‌ನಲ್ಲಿ ನಡೆಯುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಷಯದಲ್ಲಿನ ಕಲಿಕೆ ಸಮಸ್ಯೆಗಳಿಗೆ ಮತ್ತು ಮಕ್ಕಳ ಪಾಲಕರು ಹಾಗೂ ಸಾರ್ವಜನಿಕರು ಪರೀಕ್ಷೆ ವಿಧಾನ ಹಾಗೂ ವಿಜ್ಞಾನ ವಿಷಯದ ಕುರಿತು ಇರುವ ತಮ್ಮ ಸಮಸ್ಯೆಗಳಿಗೆ ಫೋನ್ ಇನ್ ಕಾರ್ಯಕ್ರಮದಲ್ಲಿ ಕರೆ ಮಾಡಿ ಪರಿಹರಿಸಿಕೊಳ್ಳುವಂತೆ ಮನವಿ ಮಾಡಿಕೊಳ್ಳಲಾಗಿದೆ.

ಕರೆ ಮಾಡಲು ಸಂಪರ್ಕಿಸಬೇಕಾದ ಸಂಖ್ಯೆ : 9448999331, 9880745215, 9008894106, 9902538662, 9972141682, 8971022626, 9663153844, 6360937338, 9731191622, 9902474707, 9880557422 ಸಂಖ್ಯೆಗೆ ಕರೆ ಮಾಡಬಹುದಾಗಿದೆ.

ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ದೂರವಾಣಿ ನಂಬರಗಳನ್ನು ನೀಡಲಾಗುವುದು. ಎಲ್ಲಾ ವಿಷಯಗಳ ಕು–ರಿತು ಕರೆ ಮಾಡಲು ಜಿಲ್ಲೆಯ ಎಲ್ಲಾ ಸರಕಾರಿ ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರ ಹಾಗೂ ಸಹ ಶಿಕ್ಷಕರ ಕಡೆಗೆ ಫೋನ್ ನಂಬರ್‌ಗಳು ಲಭ್ಯವಿರಲಿದ್ದು, ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳು ಈ ಫೋನ್ ಇನ್ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿ.11ರಂದು ಬೇಡಿಕೆಗಳ ಈಡೇರಿಕೆಗೆ 'ರುಪ್ಸಾ' ಹೋರಾಟ

**ಉದಯರಶ್ಮಿ ನ್ಯೂಸ್**

ವಿಜಯಪುರ: ಮಾನ್ಯತೆ ಪಡೆದ ಅನುದಾನ ರಹಿತ ಖಾಸಗಿ ಶಾಲೆಗಳ ಸಂಘ (ರುಪ್ಸಾ) ಕರ್ನಾಟಕ ದಿಂದ ಅನುದಾನ ರಹಿತ ಶಾಲೆಗಳ ಈ ಕೆಳಗಿನ ಕಾಣಿಸಿದ ಬೇಡಿಕೆಗಳ ಕು–ರಿತು ರಾಜ್ಯ ಸರಕಾರಕ್ಕೆ ಮನವರಿಕೆ ಮಾಡಿಕೊಡುವ ಹಿನ್ನಲೆಯಲ್ಲಿ ಒಂದು ದಿನದ ಹೊರಾಟವನ್ನು ಡಿ.11ರಂದು ಸೋಮವಾರ ಬೆಳಗಾಂವಿಯ ಸುವರ್ಣಸೌಧದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಸತೀಶ ಎಸ್. ಪಾಟೀಲ ತಿಳಿಸಿದ್ದಾರೆ.

ಬುಧವಾರ ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿದ ಅವರು, ತಮ್ಮ ಸಂಘದ ಬೇಡಿಕೆಗಳಾದ 1. 1995ರ ನಂತರದ ಇಲ್ಲಾ ಕನ್ನಡ ಮಾಧ್ಯಮ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವದು. 2. ಖಾಸಗಿ ಶಾಲೆಗಳಲ್ಲಿ ಶೇಕಡಾ 25%ರಷ್ಟು ಆರ್.ಟಿ.ಇ ಮಕ್ಕಳ ದಾಖಲಾತಿಯನ್ನು ಮರು ಸ್ಥಾಪಿಸುವ ಕುರಿತು ಹಾಗೂ ಪ್ರಸ್ತುತ ನೀಡುತ್ತಿರುವ 16,000 ವೆಚ್ಚವನ್ನು 35,000 ರೂಗಳಿಗೆ ಎರಿಸುವ ಕುರಿತು. 3. ಖಾಸಗಿ ಅನುದಾನ ರಹಿತ ಮಾನ್ಯತೆ ಪಡೆದ ಶಾಲೆಗಳ ನವೀಕರಣವನ್ನು 10 ವರ್ಷಗಳ ಅವಧಿಗೆ ನಿಗದಿ ಪಡಿಸುವ ಕುರಿತು. 4. ಖಾಸಗಿ ಶಾಲೆಗಳಿಗೆ ನವೀಕರಣ ಸಂದರ್ಭದಲ್ಲಿ ಕೇಲುವ ಫೈರ ಸೆಪ್ಟಿ ಹಾಗೂ ಕಟ್ಟಡ ಭದ್ರತಾ ಪ್ರಮಾಣ ಪತ್ರಗಳಲ್ಲಿ ರಿಯಾಯಿತಿ ನೀಡುವ ಕುರಿತಂತೆ ಈ ಎಲ್ಲ ಬೇಡಿಕೆಗಳ ಬಗ್ಗೆ ಹೋರಾಟವನ್ನು ರುಪ್ಸಾ ಕರ್ನಾಟಕ ಸಂಘದ ಡಾ: ಹಾಲನೂರ ಲೇಪಕ್ಷ ಹಾಗೂ ರಾಜ್ಯದ ಸರ್ವ ಪಧಾಧಿಕಾರಿಗಳ ನೇತೃತ್ವದಲ್ಲಿ ನಡೆಯುತ್ತಿದ್ದು ರಾಜ್ಯದ ಬಹುತೇಕ ಶಿಕ್ಷಣ ಸಂಸ್ಥೆಗಳ ಪದಾಧಿಕಾರಿಗಳು ಈ ಹೋರಾಟದಲ್ಲಿ ಪಾಲ್ಗೊಂಡು ಸಂಬಂದಿಸಿದ ಮಂತ್ರಿಗಳಿಗೆ ಹಾಗೂ ಅಧಿಕಾರಿಗಳ ಗಮನ ಸೆಳೆದು ಮನವಿ ಸಲ್ಲಿಸಲಾಗುವದೆಂದು ತಿಳಿಸಿದ್ದಾರೆ.

ಕಾರಣ ತಾಲೂಕಿನ ಎಲ್ಲಾ ಖಾಸಗಿ ಶಾಲೆಗಳ ಪದಾಧಿಕಾರಿಗಳು ಹೋರಾಟದಲ್ಲಿ ಪಾಲ್ಗೊಂಡು ರಾಜ್ಯ ಸರಕಾರಕ್ಕೆ ಸಮಸ್ಯೆಗಳ ಕುರಿತು ಮನವರಿಕೆ ಮಾಡಿಕೊಡಲು ಸಹಕ–ರಿಸಬೇಕೆಂದು ಸಂಘದ ಬೆಂಗಳೂರು ಹಾಗೂ ವಿಜಯಪೂರ ಜಿಲ್ಲಾ ಸರ್ವ ಪಧಾದಿಕಾರಿಗಳು ಕೋರಿದ್ದಾರೆ.

# ಡಿ.9 ರಂದು ಶೈಕ್ಷಣಿಕ ಚಿಂತನಗೋಷ್ಠಿ, ಆದರ್ಶ ಶಿಕ್ಷಕ ಪ್ರಶಸ್ತಿ ಪ್ರದಾನ

**ಉದಯರಶ್ಮಿ ನ್ಯೂಸ್**

ವಿಜಯಪುರ: ಡಿ.09ರಂದು ಮಧ್ಯಾಹ್ನ 12–30 ಗಂಟೆಗೆ ಕಂದಗಲ್ ಹನಮಂತರಾಯ ರಂಗ ಮಂದಿರ ವಿಜಯಪುರದಲ್ಲಿ ಆದರ್ಶ ಶಿಕ್ಷಕರ ವೇದಿಕೆ ವಿಜಯಪುರ ವತಿಯಿಂದ ಶೈಕ್ಷಣಿಕ ಚಿಂತನಾಗೋಷ್ಠಿ ಹಾಗೂ ಆದರ್ಶ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ.

ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀ ಚನ್ನವೀರ ದೇವರು, ಸಂಸ್ಥಾನ ಹಿರೇಮಠ ಕುಂಟೋಜಿ ಇವರು ವಹಿಸಲಿದ್ದಾರೆ. ಉದ್ಘಾಟಕರಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ. ಬಿ. ಪಾಟೀಲ ನೆರವೇರಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿಗಳಾದ ಟಿ ಬೂಬಾಲನ್, ಅಮ್ಮನ ಮಡಿಲು ಚಾರಿಟೇಬಲ್ ಟ್ರಸ್ಟ್, ಅಧ್ಯಕ್ಷರಾದ ಸಂಗಮೇಶ ಬಬಲೇಶ್ವರ, ಮಹಾಂತೇಶ ಬಿರಾದಾರ ಸಾರ್ವಜನಿಕ ಸಂಪರ್ಕ ಅಧಿಕಾರಿಗಳು, ಎಂ ಎಂ ಸಿಂಧೂರ ಜಂಟಿ ನಿರ್ದೇಶಕರು ಬೆಳಗಾಂವ, ಎನ್,ಎಚ್. ನಾಗೂರ್ ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ವಿಜಯಪುರ, ಶ್ರೀಮತಿ ಪ್ರಮೋದಿನಿ ಬಳೊಲಮಟ್ಟಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಗ್ರಾಮೀಣ ವಲಯ ವಿಜಯಪುರ, ಬಸವರಾಜ್ ತಳವಾರ ಕ್ಷೇತ್ರ ಶಿಕ್ಷಣಾಧಿಕಾರಿಗಳು ನಗರ ವಲಯ, ಶ್ರೀಮತಿ ಸಾಯಿರಾಬಾನು ಖಾನ್ ನಿವೃತ್ತ ಉಪ ನಿರ್ದೇಶಕರು ವಿಜಯಪುರ, ಸಿದ್ದಣ್ಣ ಸಕ್ರಿ ಆಯುಕ್ತರು ಭಾರತ್ ಸ್ಕೌಟ್ ಮತ್ತು ಗೈಡ್ಸ್, ಶರಣು ಶಬರದ ಅಧ್ಯಕ್ಷರು ಜಿಲ್ಲಾ ಯುವ ಪರಿಷತ್ ಉಪಸ್ಥಿತರಿರುವರು.

ಉಮೇಶ ಕೌಲಗಿ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಕಾರ್ಯಕ್ರಮದಲಿ ತಾಲೂಕು, ನಗರ, ಗ್ರಾಮೀಣ ಮಟ್ಟದ ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಬಸವರಾಜ ದೋರಣಹಳ್ಳಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾಯಕನಿಷ್ಠೆಗೆ ನಿದರ್ಶನ, ದಣಿವರಿಯದ ಚೇತನ ಪ್ರೊ.ಶಿವಾನಂದ ಪಟ್ಟಣಶೆಟ್ಟರ



– ಗುಲಾಬ್‌ಚಂದ್ ಆರ್. ಜಾಧವ
ಶಿಕ್ಷಕರು, ಆರ್.ಬಿ.ಪಿ.ಜಿ ಹಳಕಟ್ಟಿ ಪ್ರೌಢಶಾಲೆ, ಆಲಮಟ್ಟಿ

**ಉದಯರಶ್ಮಿ ನ್ಯೂಸ್**

ಕನ್ನಡದ ಕುಲಗುರುಗಳಾದ ಪೂಜ್ಯ ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಕುರಿತು ಡಾ. ಎನ್.ಜಗದೀಶ ಕೊಪ್ಪ ಹಾಗೂ ಪ್ರೋ.ಶಶಿಧರ ತೋಡಕರ ಅವರು ಸಂಪಾದಿಸಿ ಪ್ರಕಟಿಸಿದ ಸಮಾಜಮುಖಿ ಗ್ರಂಥದಲ್ಲಿ ಪ್ರಕಟವಾಗಿರುವಂತೆ "ಪಟ್ಟಣಶೆಟ್ಟರಿಗೆ ಸನ್ಮಾನ ಮಾಡಿದ್ದು ಒಂದು ರೀತಿ ನನಗೆ ಸಂತೋಷ, ಮತ್ತೊಂದು ರೀತಿ ಮುಜುಗರ ಅಂದರೆ ಸನ್ಮಾನ ಮಾಡಿಸಿಕೊಳ್ಳುವ ಮನೋಭಾವ ಅವರ ಹತ್ತಿರ ಇಲ್ಲ, ನಮ್ಮ ಪಟ್ಟಣಶೆಟ್ಟರೆಂದರೇ ನನ್ನ ಇನ್ನೊಂದು ಮುಖ, ಬಹಳ ಬದ್ಧತೆಯುಳ್ಳಂಥ ಮುಖ. ನಾನೊಬ್ಬನೇ ಈ ಮಠವನ್ನು ಇಷ್ಟೆತ್ತರಕ್ಕೆ ಬೆಳೆಸಲು ಸಾಧ್ಯವಿರಲಿಲ್ಲ, ನನಗೆ ಸಾಹಿತ್ಯದ ಬಗೆಗೆ ಬಹಳ ಒಲವಿದೆ. ಪ್ರತಿ ವರ್ಷ 20 ಪುಸ್ತಕಗಳನ್ನು ಪ್ರಿಂಟ್ ಮಾಡುತ್ತೇವೆ, ಅದಕ್ಕಾಗಿ 40–50 ದಿನ ನಿದ್ದೆಗೆಡುವಷ್ಟು ಕೆಲಸ ಮಾಡುತ್ತೇನೆ. ಆ ಪುಸ್ತಕದ ವಿಷಯದಲ್ಲಿ ಮಾತ್ರ, ಆಮೇಲೆ ಶಿವಾನುಭವ ಪುಸ್ತಕ ಪ್ರಕಟಣೆ ಮತ್ತು ಸಮಾಜದ ಒಂದು ಸಮಾಚಾರ ಇವುಗಳನ್ನು ಬಿಟ್ಟರೆ ಶಾಲೆ–ಕಾಲೇಜು ನನಗೇನೋ ನೋಡಾಕಾಗಲ್ಲ. ಇದನ್ನೆಲ್ಲ ನೋಡುವವರು ಪಟ್ಟಣಶೆಟ್ಟರು. ನಮ್ಮ ಸಂಸ್ಥೆಯಲ್ಲಿ ಸುಮಾರು 100 ಶಾಲೆ–ಕಾಲೇಜುಗಳಿವೆ, ಅದರಲ್ಲಿ 15 ಐ.ಟಿ.ಐಗಳಿವೆ, ಆ ಐಟಿಐಗಳ ಕನಸು ನನ್ನದು, ಆದರೆ ಅದನ್ನೆಲ್ಲ ಮಾಡಿದ್ದು ಪಟ್ಟಣಶೆಟ್ಟರು. ನಾನು ಮೊದಲು ಸ್ವಲ್ಪ 3–4 ಐಟಿಐ ಕಾಲೇಜು ಮಾಡಿದ್ದೆ ನಂತರ ಮುಂದುವರೆದು ಪಾಲಿಟೆಕ್ನಿಕ್, ಇಂಜೀನಿಯರಿಂಗ್, ಆಯುರ್ವೇದ ಕಾಲೇಜು ಅಷ್ಟೇ ಅಲ್ಲ ಸಿ.ಬಿ.ಎಸ್.ಸಿ ಶಾಲೆಗಳನ್ನು ತೆರೆದಿದ್ದಾರೆ. ಈ ದಿನಮಾನದಲ್ಲಿ ಶಾಲಾ–ಕಾಲೇಜು ನಡೆಸುವುದು ಒಂದು ದೊಡ್ಡ ಕಸರತ್ತೇ. ಆದರೆ ಪಟ್ಟಣಶೆಟ್ಟರು ನಂಬಿದವರಿಗೆ ಎಂದೂ ಮೋಸ ಮಾಡಿಲ್ಲ, ದ್ರೋಹ ಮಾಡಿಲ್ಲ, ಜೊತೆಗೆ ಅವರ ಬಗ್ಗೆ ಒಂದೊಂದು ಸಲ ನನಗೇ ಆಶ್ಚರ್ಯ ಆಗತ್ತೆ. ಏನು ಋಣಾನುಬಂಧನೋ ಏನೋ ಅವರ ಹಾಗೂ ನನ್ನ ಋಣಾನುಬಂಧ ಒಮ್ಮೊಮ್ಮೆ ನನಗೇ ಅಚ್ಚರಿ ಹುಟ್ಟಿಸುತ್ತದೆ. ತಾಯಿಯ ಪ್ರೀತಿ, ಗೆಳೆತನದ ನಿಷ್ಕಲ್ಮಶ ಸ್ವಭಾವ, ಹೀಗೆ ತಾಯಿಯ ಹಾಗೆ, ಗೆಳೆಯನ ಹಾಗೆ, ಮಾರ್ಗದರ್ಶಿ ಹಾಗೆ, ಶಿಷ್ಯನ ಹಾಗೆ, ಕೆಲವೊಂದು ಸಲ ಗುರುವಿನ ಹಾಗೆ ನಡೆದುಕೊಳ್ಳುತ್ತಾರೆ ಅವರು. ನಾನು ಎಲ್ಲಿಯಾದರೂ ಕಾರ್ಯಕ್ರಮಕ್ಕೆ ಹೋದರೆ ನನ್ನದೇ ಚಿಂತೆ ಅವರಿಗೆ. ಭಾಷಣದಲ್ಲಿ ಇದನ್ನೇ ಮಾತನಾಡಬೇಕು ನೋಡ್ರಿ, ಇದನ್ನೇ ಹೇಳಬೇಕು ನೋಡ್ರಿ ಅಯ್ಯೋ ಮಾರಾಯಾ, ನನ್ನ ಎಷ್ಟು ಕಾಳಜೀ ಮಾಡ್ತಿಯಾ ಮಾರಾಯಾ? ಅಂದರೆ ಅಷ್ಟು ಅಖಂಡ ಪ್ರೀತಿ ನನ್ನ ಮೇಲೆ ಅವರಿಗೆ. ಅದರಲ್ಲಿ ಏನೂ ಒಂದು ಚೂರು ವ್ಯತ್ಯಾಸವಿಲ್ಲ. ಎಲ್ಲಿಯಾದರೂ ಸ್ವಲ್ಪ ವಾದಗ್ರಸ್ತ ವಿಷಯವಿದ್ದರೆ ಇವ–ರಿಗೆ ಜೀವದಲ್ಲಿ ಜೀವವಿರುತ್ತಿರಲಿಲ್ಲ. ಎಲ್ಲಿ ನಮ್ಮ ಗುರುಗಳು ಮಾತಿನಲ್ಲಿ ಸಿಕ್ಕೊಂಡಬಿಡ್ತಾರೋ ಏನೋ, ಎಲ್ಲಿ ನಮ್ಮ ಗುರುಗಳಿಗೆ ತೊಂದರೆ ಆಗಬಿಡ್ತದ ಏನೋ ಅಂತಾ ಭಯಾ ಅವರಿಗೆ. ಈ ಹಿನ್ನೆಲೆಯಲ್ಲಿ ಪಟ್ಟಣಶೆಟ್ಟರು ನಮ್ಮ ಮಠದ ಒಂದು ದೊಡ್ಡ ಶಕ್ತಿ. ಸ್ವತ: ಸಿದ್ಧಲಿಂಗನೇ ಶಿವಾನಂದ ಎಂಬ ಹೆಸರಿನಲ್ಲಿ ಬಂದು ಮಠದ ಬೆಳವಣಿಗೆಗೆ ತೊಡಗಿದ್ದಾನೆ ಅಂತಾ ಹೇಳಬಲ್ಲೆನು. ದಿನಕ್ಕೆ 18 ತಾಸು ಮಠ ಹಾಗೂ ಶಿಕ್ಷಣ ಸಂಸ್ಥೆಗೆ ದುಡಿಯುತ್ತಾರೆ, ಇಂಥ ವ್ಯಕ್ತಿಗಳು ಬಹಳ ಅಪರೂಪ. ಯಾವುದೇ ಆಮಿಷಗಳಿಗೆ ಒಳಗಾಗದೇ ಮಠದ ಅಭಿವೃದ್ಧಿಯಲ್ಲಿ ತೊಡಗಿದ್ದಾರೆ. ಕೆಲವೊಂದು ಗುಣಗಳಲ್ಲಿ ಅವರನ್ನು ಹೋಲಿಸುವವರು ಯಾರೂ ಇಲ್ಲ ಹೀಗಾಗಿ ಶೆಟ್ಟರು ಬಹಳ ಅಪರೂಪ, ಅವರದ್ದು ಸೊಕ್ಕು–ಸೆಡವಿಲ್ಲದ ವ್ಯಕ್ತಿತ್ವ."

ಡಾ.ತೋಂಟದ ಸಿದ್ಧಲಿಂಗ ಶ್ರೀಗಳು 20–08–2018 ರಂದು ಮುಂಡರಗಿಯಲ್ಲಿ ಇಲಕಲ್ಲ ಶ್ರೀಗಳ, ಬೈಲೂರು ಶ್ರೀಗಳ, ಮಾಜಿ ಸಚಿವ ಎಸ್.ಎಸ್ ಪಾಟೀಲರ, ಅಂದಿನ ಶಾಸಕ ರಾಮಕೃಷ್ಣ ದೊಡ್ಡಮನಿ ಹಾಗೂ ಭಕ್ತರ ಸಮ್ಮುಖದಲ್ಲಿ ನಡೆದ ಶ್ರೀ ಪಟ್ಟಣಶೆಟ್ಟರ ಸಂಮಾನ ಸಮಾರಂಭದಲ್ಲಿ ಅವರ ಕಾರ್ಯವೈಖರಿ ಕುರಿತು ನುಡಿದ ಅಭಿಮಾನದ ನುಡಿಗಳಿವು. ಶ್ರೀಗಳು ಹಾಗೂ ಪಟ್ಟಣಶೆಟ್ಟರ ನಡುವಿನ ನಾಲ್ಕು ದಶಕಗಳಿಗೂ ಹೆಚ್ಚಿನ ಒಡನಾಟ, ಸುದೀರ್ಘ ಬಾಂಧವ್ಯವನ್ನು ಸೂಚಿಸುವ ಹೃದಯಸ್ಪರ್ಶಿ ಮಾತುಗಳಾಗಿದ್ದವು, ಆ ಕಾರ್ಯಕ್ರಮ ಗುರು–ಶಿಷ್ಯರ ಅಂತ:ಕರಣದ ಭಾವತೀವ್ರತೆಗೆ ಸಾಕ್ಷಿಯಾಗಿತ್ತು.

ಕುಷ್ಟಗಿ ತಾಲೂಕಿನ ಮಾಲಗಿತ್ತಿಯ ಸಾಮಾನ್ಯ ವರ್ತಕ ಕುಟುಂಬದಲ್ಲಿ ಜನಿಸಿದ ಪ್ರತಿಭಾವಂತ ಬಾಲಕರಾಗಿದ್ದ ಪಟ್ಟಣಶೆಟ್ಟರಿಗೆ ತಮ್ಮ ಬದುಕನ್ನು ತಾವೇ ಕಟ್ಟಿಕೊಳ್ಳುವ ಅನಿವಾರ್ಯವಿತ್ತು, ಶಿಕ್ಷಣವೆಂಬ ಅಸ್ತ್ರದ ಮೊರೆಹೋದ ಅವರು 1972ಕ್ಕೆ 8ನೇ ತರಗತಿಗೆ ಡಂಬಳದಲ್ಲಿನ ಜೆ.ಟಿ ಹೈಸ್ಕೂಲಿನ ವಿದ್ಯಾರ್ಥಿಯಾಗಿ ಓದಲು ಬಂದವರು.

2 ವರ್ಷಗಳ ನಂತರ 1974ರಲ್ಲಿ ಅಂದಿನ ಸಿದ್ಧರಾಮ ದೇವರಾಗಿದ್ದ ತೋಂಟದ ಶ್ರೀಗಳು ಗದಗ ತೋಂಟದಾರ್ಯ ಮಠಕ್ಕೆ ಪಾದಾರ್ಪಣೆ ಮಾಡಿದಾಗ ಮಠ ಅಕ್ಷರಶ: ಶೂನ್ಯಪೀಠವೇ ಆಗಿತ್ತು. ಒಂದು ಕಾಲಕ್ಕೆ ರಾಜಸತ್ತೆಯಲ್ಲಿ ಮೆರೆದಿದ್ದ ಮಠ ತನ್ನ ವೈಭವವನ್ನೆಲ್ಲ ಕಳೆದುಕೊಂಡು ಬಡವಾಗಿತ್ತು. ಮಠದ ಆಸ್ತಿಗಳೆಲ್ಲ ಪರಭಾರೆಯಾಗಿ ಪಟ್ಟಣಶೆಟ್ಟರ ಮಾತಿನಲ್ಲೇ ಹೇಳುವುದಾದರೆ ಅಂ–ದು ಡಂಬಳ ಮಠದಲ್ಲಿ ಕೇವಲ ಚಿಕ್ಕದೊಂದು 25 ವೋಲ್ಟಿನ ಬಲ್ಬ್ ಅಷ್ಟೇ ಉಳಿದುಕೊಂಡಿತ್ತು. ಇಂಥ ಮಠವನ್ನು ಮೊದಲಿನಿಂದ ಕಟ್ಟುವ ಹೊಣೆಹೊತ್ತ ಶ್ರೀಗಳು ಪೀಠಕ್ಕೆ ಆಗಮಿಸಿದ ಕೆಲವೇ ದಿನಗಳಲ್ಲಿ ಡಂಬಳ ಬೋರ್ಡಿಂಗ್‌ನಲ್ಲಿದ್ದ ವಿದ್ಯಾರ್ಥಿಗಳನ್ನು ಸಂದರ್ಶಿಸಿದಾಗ, ಅಲ್ಲಿ ಶಾಲೆಗೆ ಪ್ರಥ–ಮ ದರ್ಜೆಯೊಂದಿಗೆ ಪಾಸಾಗಿದ್ದ ಪ್ರತಿಭಾವಂತ ವಿದ್ಯಾರ್ಥಿ ಪಟ್ಟಣಶೆಟ್ಟರ ಭೇಟಿಯಾಯಿತು. ದಿವ್ಯ ತೇಜಸ್ಸುಳ್ಳ ಯುವಯತಿಗಳಾಗಿದ್ದ ಸಿದ್ಧಲಿಂಗ ಶ್ರೀಗಳನ್ನು ಮನಸಾರೆ ಗುರುಗಳೆಂದು ಒಪ್ಪಿಕೊಳ್ಳಲು ಪಟ್ಟಣಶೆಟ್ಟರಿಗೆ ಹೆಚ್ಚು ಹೊತ್ತು ಹಿಡಿಯಲಿಲ್ಲ. ಹೈಸ್ಕೂಲಿನಲ್ಲಿರುವಾಗ ಶ್ರೀಗಳ ಆಗಮನದ ನಂತರ ತೋಂಟದಾರ್ಯ ಮಠದ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದ ಪಟ್ಟಣಶೆಟ್ಟರು ಮುಂದೆ ಶ್ರೀಗಳ ಅಪೇಕ್ಷೆಯಂತೆ ಗದುಗಿನ ಜೆ.ಟಿ ಕಾಲೇಜಿನಲ್ಲಿ ಪದವಿಪೂರ್ವ ಹಾಗೂ ಪದವಿ ಶಿಕ್ಷಣವನ್ನು ಪಡೆದುಕೊಂಡರು. ಮುಂದೆ ಮುಂಬೈ ಸ್ಕೂಲ್ ಆಫ್ ಎಕನಾಮಿಕ್ಸ್ ಪ್ರವೇಶ ದೊರೆತರೂ ಅದನ್ನು ತ್ಯಜಿಸಿ ಶ್ರೀಗಳ ಒತ್ತಾಸೆಯಿಂದ ತಮ್ಮ ಕಂದಾಯ ವಿಭಾಗದ ವ್ಯಾಪ್ತಿಯಲ್ಲಿ ಇದ್ದ ಅಂದಿನ ಹೈದ್ರಾಬಾದ್ ಕರ್ನಾಟಕದ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ ಅರ್ಥಶಾಸ್ತ್ರದಲ್ಲಿ ಸ್ನಾತಕ ಪದವಿ ಪಡೆದುಕೊಂಡರು.

ಕೈತುಂಬ ಹಣ ಸಿಗುವ ಪ್ರಮುಖ ಇಲಾಖೆಗಳ ಸರ್ಕಾರಿ ಉದ್ಯೋಗಗಳು ಪಟ್ಟಣಶೆಟ್ಟರನ್ನು ಅಂದು ಅರಸಿ ಬಂದರೂ ಅವುಗಳನ್ನು ತ್ಯಜಿಸಿ ತೋಂಟದ ಶ್ರೀಗಳ ಮೇಲಿನ ನಿಸ್ವಾರ್ಥ ಪ್ರೀತಿ ಹಾಗೂ ಅಂತ:ಕರಣ ಕಾರಣವಾಗಿ ಶ್ರೀಗಳ ಆಶಯದಂತೆ ಶ್ರೀಮಠದ ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸಿದರು. ಇತ್ತ ಶ್ರೀಗಳಿಗೆ ತೋಂಟದಾರ್ಯ ಮಠವನ್ನು ಪ್ರಗತಿಪಥದತ್ತ ಒಯ್ಯಲು ಬಲವಾದ ಕೈಗಳ ಅವಶ್ಯಕತೆಯಿತ್ತು, ಮಠವನ್ನೇ ಮನೆಯೆಂದು ತಿಳಿದು ಮೈ–ಮನ ಮೆತ್ತಗಾಗಿಸಿ ಶ್ರಮಿಸುವ ಸಾರಥಿ ಬೇಕಿತ್ತು, ಇಂಥ ಸನ್ನಿವೇಶದಲ್ಲಿ ಪಟ್ಟಣಶೆಟ್ಟರು ಈ ಕಾರ್ಯಕ್ಕೆ ಎಲ್ಲ ರೀತಿಯಿಂದಲೂ ಹೇಳಿ ಮಾಡಿಸಿದ ವ್ಯಕ್ತಿತ್ವ ಉಳ್ಳವರಾಗಿದ್ದರು.

ಪ್ರಾರಂಭದಲ್ಲಿ ಗದುಗಿನ ಎ. ಎಸ್.ಎಸ್ ಕಾಮರ್ಸ್ ಕಾಲೇಜಿನಲ್ಲಿ ಹಾಗೂ ಜೆ.ಟಿ ಕಾಲೇಜಿನಲ್ಲಿ ಅರ್ಥ–ಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ನಂತರ ಪಟ್ಟಣಶೆಟ್ಟರು ಶ್ರೀಗಳ ಆಣತಿಯಂತೆ ಶ್ರೀಮಠದ ಆಡಳಿತ ಅಧಿಕಾರಿ ಹುದ್ದೆಯೊಂದಿಗೆ ಡಂಬಳದ ತೋಂಟದಾರ್ಯ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾಗಿ ಹಾಗೂ ಮುಂದೆ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. ಅಲ್ಲದೇ 1976 ರಲ್ಲಿ ಆರಂಭವಾದ ಶ್ರೀಮಠದ ಅಧ್ಯಯನ ಸಂಸ್ಥೆಯ ಕರಣಿಕನಾಗಿ/ ಕಾರ್ಯದರ್ಶಿಗಳಾಗಿ ದಣಿವ–

## ಡಿ.08 ರಂದು ಬೆಳಗಾವಿ ರುದ್ರಾಕ್ಷಿಮಠದ 'ಸೇವಾರತ್ನ ಪ್ರಶಸ್ತಿ' ಸ್ವೀಕರಿಸುವ ನಿಮಿತ್ಯ ವಿಶೇಷ ಲೇಖನ

ರಿಯದ ಸೇವೆ ಸಲ್ಲಿಸಿದ ಕಾರಣ ನೂರಾರು ಪುಸ್ತಕ ಪ್ರಕಟಿಸಲು ಶ್ರೀಗಳಿಗೆ ಸಾಧ್ಯವಾಯಿತು. ಶ್ರೀಗಳ ಅಪೇಕ್ಷೆಯಂತೆ ತೋಂಟದಾರ್ಯ ಮಠದ ಆಡಳಿತಾಧಿಕಾರಿಗಳಾಗಿ, ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿಯಾಗಿ ಶ್ರೀಮಠದ ಶ್ರೇಯೋಭಿವೃದ್ಧಿಗಾಗಿ ಹಗಲಿರುಳೆನ್ನದೇ ದುಡಿಯತೊಡಗಿದರು.

**"ನಾನು ಬಂದ ಕಾರ್ಯಕ್ಕೆ ನೀವು ಬಂದೆರಯ್ಯಾ!**
**ನೀವು ಬಂದ ಕಾರ್ಯಕ್ಕೆ ನಾನು ಬಂದೆನಯ್ಯಾ!**
**ನಾನು, ನೀವು ಬಂದ ಕಾರ್ಯಕ್ಕೆ ,**
**ಪ್ರಭುದೇವರು ಬಂದರಯ್ಯಾ!**
**ಕಲ್ಯಾಣವೆಂಬುದು ಪ್ರಣತೆಯಾಗಿತ್ತು!"**

ಧಾರ್ಮಿಕ ಚೌಕಟ್ಟಿಗೆ ಸೀಮಿತವಾಗಿದ್ದ ತೋಂಟದಾರ್ಯ ಮಠವನ್ನು ಸಮಾಜೋಧಾರ್ಮಿಕ ನೆಲೆಗಟ್ಟಿನಲ್ಲಿ, ಬಸವತತ್ವದ ನೆರಳಿನಲ್ಲಿ ಮುನ್ನಡೆಸುವ ಉದ್ದೇಶದಿಂದ ತೋಂಟದ ಶ್ರೀಗಳು ನಾಡೇ ಬೆರಗಾಗುವಂತೆ ಕಾರ್ಯತತ್ಪರರಾಗಿದ್ದರು. ಆದ–ರೆ ಶ್ರೀಮಠದ ಆರ್ಥಿಕ ಸ್ಥಿತಿ ಚಿಂತಾಜನಕವಾಗಿತ್ತು, ಈ ವಿಷಮ ಘಳಿಗೆಯಲ್ಲಿ ಮಠವನ್ನು ಆರ್ಥಿಕವಾಗಿ ಸದೃಢವಾಗಿಸುವ ಹೊಣೆಯನ್ನು ಪೂಜ್ಯರು ಶಿವಾನಂದ ಪಟ್ಟಣಶೆಟ್ಟರ ಹೆಗಲಿಗೇರಿಸಿದರು. ಸ್ವತ: ಓರ್ವ ಅಧ್ಯಯನಶೀಲ ಅರ್ಥಶಾಸ್ತ್ರಜ್ಞರಾದ ಅವರಿಗೆ ಈ ಕಾರ್ಯವನ್ನು ನೆರವೇ–ರಿಸಲು ಬೇಕಾದ ಜಾಣ್ಮೆ, ಕೌಶಲ, ತಾಳ್ಮೆ ಹಾಗೂ ಚತುರತೆ ಇತ್ತು.

ಗ್ರಾಮೀಣ ಭಾಗದ ಮಕ್ಕಳಿಗೆ ಕಡಿಮೆ ಫೀಯಲ್ಲಿ ಗುಣಮಟ್ಟದ ಶಿಕ್ಷಣ ಸಿಗಬೇಕೆಂಬ ತೋಂಟದ ಶ್ರೀಗಳ ಕನಸನ್ನು ಕಾರ್ಯರೂಪಕ್ಕೆ ತರಲು ಪಟ್ಟಣಶೆಟ್ಟರು ಪಣ ತೊಟ್ಟರು. 1976ರಲ್ಲಿ ಪೂಜ್ಯರು ಸ್ಥಾಪಿಸಿದ ತೋಂಟದಾರ್ಯ ವಿದ್ಯಾಪೀಠವೆಂಬ ಸಸಿಗೆ ನೀರೆರೆದು ಪೋಷಿಸಲು ಆರಂಭಿಸಿದ ಪಟ್ಟಣಶೆಟ್ಟರು ಗದಗ ಶಹರವನ್ನು ಕೇಂದ್ರಸ್ಥಾನವಾಗಿಟ್ಟುಕೊಂಡು ನಾಡಿನ ವಿವಿಧ ಜಿಲ್ಲೆಗಳಲ್ಲಿ ತೋಂಟದಾರ್ಯ ಮಠದ ಶಾಲಾ–ಕಾಲೇಜುಗಳನ್ನು ತೆರೆದು ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಹೊಸ ವ್ಯಾಖ್ಯಾನ ಬರೆದರು. ಈ ವಿದ್ಯಾಕೇಂದ್ರಗಳು ತೋಂಟದಾರ್ಯ ಮಠದ ಕೀರ್ತಿಯನ್ನೂ ಕೂಡ ನಾಡಿನ ಉದ್ದಗಲ ಪಸರಿಸಿದವು.

ಶಿಶುಮಂದಿರ, ಪ್ರಾಥಮಿಕ, ಪ್ರೌಢ, ಪದವಿಪೂರ್ವ, ಪದವಿ, ಪಾಲಿಟೆಕ್ನಿಕ್, ಇಂಜಿನಿಯರಿಂಗ್, ಆಯುರ್ವೇದ, ಸಿ.ಬಿ.ಎಸ್.ಇ, ವಸತಿ ನಿಲಯಗಳು, ಶಿಕ್ಷಣ ಮಹಾವಿದ್ಯಾಲಯಗಳನ್ನು ಒಳಗೊಂಡು 100ಕ್ಕೂ ಹೆಚ್ಚು ವಿದ್ಯಾಕೇಂದ್ರಗಳು ತಲೆ ಎತ್ತಿ ಸಾವಿರಾರು ವಿದ್ಯಾರ್ಥಿಗಳಿಗೆ ಸುಭದ್ರ ಭವಿಷ್ಯವನ್ನು ಕಟ್ಟಿಕೊಟ್ಟವು. ಶಾಲೆ–ಕಾಲೇಜುಗಳನ್ನು ಕಟ್ಟಿ ಬೆಳೆಸುವ ಕಾರ್ಯ ಸಾಮಾನ್ಯವಾಗಿರಲಿಲ್ಲ, ಪಟ್ಟಣಶೆಟ್ಟರ ಅಪಾರ ಬದ್ಧತೆ ಹಾಗೂ ಪ್ರಾಮಾಣಿಕತೆಯಿಂದ ಬಂದ ಎದೆಗಾ–ರಿಕೆಯ ಪರಿಣಾಮವಾಗಿ ಈ ಕಾರ್ಯ ಸಾಧುವಾಯಿತು. ಇಂದು ಈ ಶಾಲಾ–ಕಾಲೇಜುಗಳಲ್ಲಿ ಓದಿದ ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿದ್ದಾರೆ. 30000ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿರುವರು.

ಶ್ರೀಗಳು ಮಠಕ್ಕೆ ಆಗಮಿಸಿದಾಗ ಮಠದ ಅಪಾರ ಜಮೀನುಗಳು ಅನ್ಯರ ವಶದಲ್ಲಿದ್ದವು, ಕಾನೂನಾತ್ಮಕವಾಗಿ ಅವುಗಳನ್ನು ಮತ್ತೇ ಮಠಕ್ಕೆ ಮರಳಿಸುವ ನಿಟ್ಟಿನಲ್ಲಿ ಪಟ್ಟಣಶೆಟ್ಟರು ಪ್ರಾಮಾಣಿಕವಾಗಿ ಖ್ಯಾತ ವಕೀಲರಾದ ಶರಣ ಶ್ರೀ ಎಸ್.ಎಸ್.ಶೆಟ್ಟರ ಹಾಗೂ ಶ್ರೀಮಠದ ಭಕ್ತರ ಹಾಗೂ ಮ್ಯಾನೇಜರ್ ಶ್ರೀ ಅಂಗಡಿ ಮುಂತಾದವರ ಸಹಕಾರದೊಂದಿಗೆ ಕಟಿಬದ್ಧರಾಗಿ ಕಾರ್ಯ ನಿರ್ವಹಿಸಿದ ಪರಿಣಾಮ ಮತ್ತೇ ತೋಂಟದಾರ್ಯ ಮಠ ತನ್ನ ಹಳೆಯ ಸಂಪದ್ಭರಿತ ವೈಭವವನ್ನು ದಕ್ಕಿಸಿಕೊಂಡಿತು.

ಕೇವಲ ಗದಗ ಜಿಲ್ಲೆ ಮಾತ್ರವಲ್ಲದೇ ನಾಡಿನ ಬೇರೆ–ಬೇರೆ ಜಿಲ್ಲೆಗಳಲ್ಲಿದ್ದ ಶ್ರೀಮಠದ ಆಸ್ತಿಗಳನ್ನು ಸಂರಕ್ಷಿಸಿ ಶ್ರೀಗಳ ಮಾರ್ಗದರ್ಶನದಲ್ಲಿ ಅವುಗಳನ್ನು ಅರ್ಥಪೂರ್ಣವಾಗಿ ವಿನಿಯೋಗಿಸಿದ ಶ್ರೇಯಸ್ಸು ಪಟ್ಟಣಶೆಟ್ಟರಿಗೆ ಸಲ್ಲುತ್ತದೆ.

ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪನವರ ಸಂಸ್ಥೆಯ ಏಕೈಕ ಟ್ರಸ್ಟಿಯಾಗಿ ಉಳಿದಿದ್ದ ಮಾನ್ಯ ಎಸ್.ನಿಜಲಿಂಗಪ್ಪನವರು ಸಂಸ್ಥೆಯನ್ನು ತೋಂಟದ ಶ್ರೀಗಳಿಗೆ ಒಪ್ಪಿಸುವ ಬಯಕೆ ವ್ಯಕ್ತಪಡಿಸಿದರು. ಸಂಸ್ಥೆಯ ಕುರಿತಾಗಿ ಅನೇಕ ವ್ಯಾಜ್ಯಗಳು ನ್ಯಾಯಾಲಯದಲ್ಲಿದ್ದ ಕಾರಣ ಶ್ರೀಗಳು ಇದಕ್ಕೆ ಸಮ್ಮತಿ ವ್ಯಕ್ತಪಡಿಸಲಿಲ್ಲ, ಆದರೆ ಶಿವಾನಂದ ಪಟ್ಟಣಶೆಟ್ಟರ ಮನವೊಲಿಕೆಯಿಂದ ಶ್ರೀಗಳು ಹರ್ಡೇಕರ ಮಂಜಪ್ಪನವರ ಸಂಸ್ಥೆಯನ್ನು ಪಡೆಯಲು ಅನುಮತಿ ನೀಡಿದರು. ಮುಂದೆ ಪಟ್ಟಣಶೆಟ್ಟರು ನಿಜಲಿಂಗಪ್ಪನವರ ಹಾಗೂ ಶ್ರೀಗಳ ಒಟ್ಟು ಮೊಕ್ತೆಯಾರ ಪತ್ರವನ್ನು ತಮ್ಮ ಹೆಸರಿನಲ್ಲಿ ಪಡೆದು ನ್ಯಾಯಾಲಯಗಳಲ್ಲಿ ಸಂಸ್ಥೆಯ ಮೇಲಿದ್ದ ಸುಮಾರು 19 ಪ್ರಕರಣಗಳನ್ನೂ ಸರ್ವೋಚ್ಚ ನ್ಯಾಯಾಲಯದ ವರೆಗೂ ಹೋಗಿ ಇತ್ಯರ್ಥಪಡಿಸಿ ಇತಿಹಾಸ ಸೃಷ್ಟಿಸಿದರು.

ಕರ್ನಾಟಕದ ಗಾಂಧಿ ಹರ್ಡೇಕರ್ ಮಂಜಪ್ಪನವರ ಸಮಾಧಿಯು ಆಲಮಟ್ಟಿ ಡ್ಯಾಂನಲ್ಲಿ ಮುಳುಗಿಹೋಗಿ–ತ್ತು. ಆ ಸಮಾಧಿಯನ್ನು ಪೂಜ್ಯರ ನೇತೃತ್ವದಲ್ಲಿ ಸ್ಥಳಾಂತರಿಸಿ ಅವರ ಭವ್ಯವಾದ ಸ್ಮಾರಕ ಭವನ ನಿರ್ಮಿಸಲು ಕಾರಣರಾದರು.

ಹರ್ಡೇಕರ್ ಮಂಜಪ್ಪನವರ ಸಂಸ್ಥೆಗೆ ಶ್ರೀಗಳ ಪ್ರಭಾವವನ್ನು ಉಪಯೋಗಿಸಿಕೊಂಡು ವಿಶಾಲವಾದ ಜಾಗೆಯನ್ನು ಪಡೆದು ಅದಕ್ಕೆ ಸುಸಜ್ಜಿತವಾದ ಕಂಪೌಂಡ್–ಕಟ್ಟಡಗಳನ್ನು ನಿರ್ಮಿಸಿ ಅಲ್ಲಿ ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪನವರ ಸ್ಮಾರಕ ಭವನ, ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಹಾಗೂ ಪದವಿ ಕಾಲೇಜು, ಐ.ಟಿ.ಐ, ಡಿ.ಇಡಿ ಮುಂತಾದ ಸಮೂಹ ಶಿಕ್ಷಣ ಸಂಸ್ಥೆಗಳನ್ನು ಅಲ್ಲಿ ಪ್ರಾರಂಭಿಸಿದರು.

ತಮ್ಮೆಲ್ಲ ಕಾರ್ಯ ಒತ್ತಡಗಳ ನಡುವೆಯೂ ಡಂಬಳದ ತೋಂಟದಾರ್ಯ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ನಿವೃತ್ತಿಯುವರೆಗೂ ಅರ್ಥಶಾಸ್ತ್ರ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದ ಪಟ್ಟಣಶೆಟ್ಟರು ದ್ವಿತಿಯ ಪಿಯುಸಿ ವಿದ್ಯಾರ್ಥಿಗಳಿಗೆ 'ಅರ್ಥಶಾಸ್ತ್ರ' ಎಂಬ ಜನಪ್ರಿಯ ಪುಸ್ತಕವನ್ನು ಸಹ ಬರೆದು ಪ್ರಕಟಿಸಿ ರಾಜ್ಯದ ಅರ್ಥಶಾಸ್ತ್ರ ವಿಷಯ ಓದುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯಾದರು. ಇದಿಷ್ಟೇ ಅಲ್ಲದೇ ತೋಂಟದ ಶ್ರೀಗಳ ಕು–ರಿತು ಅವರ ಜೀವಿತ ಅವಧಿಯಲ್ಲಿ 'ಕೋಮುಸೌಹಾರ್ದತೆಯ ಹರಿಕಾರರು' ಎಂಬ ಶ್ರೀಗಳ ಅಧಿಕೃತ ಜೀವನ ಚ–ರಿತ್ರೆಯನ್ನೊಳಗೊಂಡ ಪುಸ್ತಕ ಹಾಗೂ 'ಎಡೆಯೂರು ಸತ್ಯಕಥನ' ಎಂಬ ಪುಸ್ತಕಗಳನ್ನು ಬರೆದು ಪ್ರಕಟಿಸಿದ ಕೀರ್ತಿ ಪಟ್ಟಣಶೆಟ್ಟರಿಗೆ ಸಲ್ಲುತ್ತದೆ.

ಡಂಬಳ ಕಾಲೇಜಿನಿಂದ ನಿವೃತ್ತಿಯಾದ ನಂತರವೂ ಶ್ರೀಮಠದ ಕಾರ್ಯಚಟುವಟಿಕೆಗಳಲ್ಲಿ ದಣಿವ–ರಿಯದೇ ಪಾಲ್ಗೊಳ್ಳುವ ಪಟ್ಟಣಶೆಟ್ಟರು, ಬಸವಣ್ಣನವರ ಕಾಯಕನಿಷ್ಠೆಗೆ ನಿದರ್ಶನ. ಶ್ರೀಮಠದ ಪ್ರಗತಿಯಲ್ಲಿ ತಮ್ಮ ಪಾತ್ರ ಎಷ್ಟೇ ಇದ್ದರೂ ಸಕಲವೂ ಸಿದ್ಧಲಿಂಗೇಶ್ವರರ ಹಾಗೂ ಸಿದ್ಧಲಿಂಗ ಮಹಾಸ್ವಾಮಿಗಳ ಕೃಪೆ ಎನ್ನುವ ನಿಸ್ಪೃಹ ವ್ಯಕ್ತಿತ್ವ ಇವರದ್ದು.

**ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ**
**ಏಡಿಸಿ ಕಾಡಿತ್ತು ಶಿವನ ಡಂಗುರ**
**ಮಾಡಿದೆನೆನ್ನದಿರಾ ಲಿಂಗಕ್ಕೆ**
**ಮಾಡಿದೆನೆನ್ನದಿರಾ ಜಂಗಮಕ್ಕೆ**
**ಮಾಡಿದೆನೆಂಬುದು ಮನದಲಿಲದಿದ್ದಡೆ**
**ಬೇಡಿತ್ತನೀವನು ಕೂಡಲಸಂಗಮದೇವ**

ಎಂಬ ವಚನದಂತೆ ಎಲ್ಲಿಯೂ ಕೂಡ ಆತ್ಮಪ್ರಶಂಸೆ ಮಾಡಿಕೊಳ್ಳದ, ಪ್ರಚಾರ–ಪ್ರಶಂಸೆ ಬಯಸದ ನಿಸ್ವಾರ್ಥಿಗಳಿವರು. ಕೇವಲ ಮಠ ಮಾತ್ರವಲ್ಲದೇ ಸಮಾಜದ ಅನೇಕ ಸಂಘ–ಸಂಸ್ಥೆಗಳಲ್ಲಿ ಗುರುತಿಸಿಕೊಂಡಿರುವ ಇವರು ಜನಾನುರಾಗಿಗಳು.

ತೋಂಟದಾರ್ಯ ಮಠದ ಆಡಳಿತಾಧಿಕಾರಿಗಳಾಗಿ, ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿಗಳಾಗಿ, ಹಂಪಿ ವಿಶ್ವವಿದ್ಯಾಲಯದ ಸಿನೆಟ್ ಸದಸ್ಯರಾಗಿ, ಎಡೆಯೂರು ಸಿದ್ಧಲಿಂಗೇಶ್ವರ ದೇವಸ್ಥಾನ ಸಮಿತಿಯ ವ್ಯವಸ್ಥಾಪಕ ಸದಸ್ಯರಾಗಿ, ಗದಗ ಜಿಲ್ಲಾ ಅರ್ಥ–ಶಾಸ್ತ್ರ ಉಪನ್ಯಾಸಕರ ಸಂಘದ ಅಧ್ಯಕ್ಷರಾಗಿ, ಗದಗ ಜಿಲ್ಲಾ ಸಹಕಾರಿ ಯೂನಿಯನ್ ನಿರ್ದೇಶಕರಾಗಿ, ಜಗದ್ಗುರು ತೋಂಟದಾರ್ಯ ನೌಕರರ ಪತ್ತಿನ ಸಹಕಾರಿ ಸಂಘದ ಜಗದ್ಗುರು ತೋಂಟದಾರ್ಯ ಕ್ರೆಡಿಟ್ ಸಹಕಾರಿ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿ, ಬೈಲಹೊಂಗಲ ಬ್ಯಾಂಕಿನ ಅಧ್ಯಕ್ಷರಾಗಿ, ಗದಗ ಬೀರೇಶ್ವರ ಬ್ಯಾಂಕಿನ ಅಧ್ಯಕ್ಷರಾಗಿ ಮತ್ತು ಗದಗ ಕೆ.ಎಲ್.ಇ ಸಂಸ್ಥೆಯ ಜೆ.ಟಿ ಮಹಾವಿದ್ಯಾಲಯದ ಸದಸ್ಯರಾಗಿ ಸಾಮಾಜಿಕ ಸೇವೆ ಸಲ್ಲಿಸುತ್ತಿದ್ದಾರೆ.

ತೋಂಟದ ಸಿದ್ಧಲಿಂಗ ಶ್ರೀಗಳ ಅಗಲಿಕೆಯಿಂದ ಮಾನಸಿಕ ಹಾಗೂ ದೈಹಿಕವಾಗಿ ಕುಗ್ಗಿಹೋಗಿದ್ದ ಪಟ್ಟಣಶೆಟ್ಟರಲ್ಲಿ ಇಂದಿಗೂ ಅನಾಥ–ಭಾವ ಮಡುಗಟ್ಟಿರುವುದು ಸತ್ಯ. ಆದರೆ ಶ್ರೀಗಳ ಅನುಪಸ್ಥಿತಿಯಲ್ಲಿ ತೋಂಟದ ಸಿದ್ಧರಾಮ ಶ್ರೀಗಳ ನೇತೃತ್ವದಲ್ಲಿ ಮಠವನ್ನು ಮುನ್ನೆಡೆಸುವ ಜವಾಬ್ದಾರಿಯ ಕಾರಣದಿಂದ ದು:ಖವನ್ನೆಲ್ಲ ಸಹಿಸಿಕೊಂಡು ಮತ್ತೇ ಕಾರ್ಯತತ್ಪರರಾಗಿದ್ದಾರೆ. ನಿಮ್ಮ ಪಾದಸಾಕ್ಷಿ, ಎನ್ನ ಮನಸಾಕ್ಷಿ ಎಂಬಂತೆ ತೋಂಟದ ಸಿದ್ಧಲಿಂಗ ಶ್ರೀಗಳೊಂದಿಗೆ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಅವರ ಮಾನಸಪುತ್ರರಾಗಿದ್ದ ಪಟ್ಟಣಶೆಟ್ಟರು ಈಗ ನಿಮ್ಮ ನೆನಹಾದಾಗಲೇ ಉದಯ, ಮರೆವಾದಾಗಲೇ ಅಸ್ತಮಾನ ಎಂಬ ಶರಣವಾಣಿಯಂತೆ ಶ್ರೀಗಳ ಹೆಸರನ್ನು ನಾಡಿನಲ್ಲಿ ಚಿರಸ್ಥಾಯಿಯಾಗಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ತೋಂಟದ ಸಿದ್ಧಲಿಂಗ ಶ್ರೀಗಳ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ ನಿಧಿಯನ್ನು ಸ್ಥಾಪಿಸಿ ಪ್ರತಿ ವರ್ಷ ನಾಡಿನ ಶ್ರೇಷ್ಠ ಸಾಧಕರಿಗೆ ಶ್ರೀಗಳ ಹೆಸರಿನಲ್ಲಿ 5 ಲಕ್ಷ ರೂಪಾಯಿ ಮೊತ್ತದ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡುವ ಕಾರ್ಯ ಆರಂಭಿಸಿದ್ದಾರೆ.

ಅವರಿಗೆ ಸಮಯದ ಮಿತಿ ಇಲ್ಲದೆ, ನಿದ್ದೆ–ನೀರಡಿಕೆ–ಆಹಾರದ ಸುಳಿವೂ ಇಲ್ಲದೇ ಪ್ರತಿದಿನವೂ ಕಾರ್ಯಚಟುವಟಿಕೆಗಳಲ್ಲಿ ತಲ್ಲೀನರಾಗುವುದೇ ಪವಾಡಸದೃಶ. ದಿನಕ್ಕೆ ಕನಿಷ್ಠ ನೂರು ಜನ ನೌಕರರು ಅಹವಾಲು ಹಿಡಿದು ಬಂದರೂ ಆ ಎಲ್ಲ ಆಶೋತ್ತರಗಳನ್ನು ಆಲಿಸಿ ಪರಿಹಾರ ಸೂಚಿಸುವ ಪರಿ ವಿದ್ಯಾಪೀಠದ ನೌಕರರು, ಪಾಲಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಅಚ್ಚ–ರಿಯೂ ಹೌದು, ಮಾದರಿಯೂ ಹೌದು. ಕಾಯಕವನ್ನೇ ಸೇವೆಯೆಂದು ಉಸಿರಾಡುವ ಪಟ್ಟಣಶೆಟ್ಟರು ನಾಗನೂರು ಮಠದ ಲಿಂ.ಶಿವಬಸವ ಮಹಾಸ್ವಾಮಿಗಳ ಅಭಿಮಾನಿಗಳಾಗಿ ಬೆಳಗಾವಿ ರುದ್ರಾಕ್ಷಿಮಠದ 2023ನೇ ಸಾಲಿನ 'ಸೇವಾರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ. ದಿ.08–12–2023 ರಂದು ಬೆಳಗಾವಿ ಮಠದಲ್ಲಿ ಜರುಗುವ ಪರಮ ಪೂಜ್ಯ ಶಿವಬಸವ ಮಹಾಸ್ವಾಮಿಗಳ ಜಯಂತಿ ಮಹೋತ್ಸವದಲ್ಲಿ ಶ್ರೀಯುತ–ರಿಗೆ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ತೋಂಟದಾರ್ಯ ವಿದ್ಯಾಪೀಠದ ಸಮಸ್ತ ನೌಕರರಿಗೆ, ಪಟ್ಟಣಶೆಟ್ಟರ ಅಭಿಮಾನಿಗಳಿಗೆ, ವಿದ್ಯಾರ್ಥಿ ಸಮೂಹಕ್ಕೆ ಸ್ನೇಹಿತರಿಗೆ ಹಾಗೂ ಕುಟುಂಬವರ್ಗಕ್ಕೆ ಸಂತಸ ಉಂಟಾಗಿದೆ.



# ಕರ್ಕಶ ಶಬ್ಧದ ಸೈಲೆನ್ಸರ್ ಕಳಚಿಸಿ ದಂಡದ ಬಿಸಿ ಮುಟ್ಟಿಸಿದ ಪಿಎಸ್ಸೈ

**ಉದಯರಶ್ಮಿ ನ್ಯೂಸ್**



ಮುದ್ದೇಬಿಹಾಳ: ಪಟ್ಟಣದ ಪ್ರಮುಖ ರಸ್ತೆಗಳು ಸೇರಿದಂತೆ ಎಲ್ಲಂದರಲ್ಲಿ ದ್ವಿಚಕ್ರ ವಾಹನಗಳಿಗೆ ಕರ್ಕಶ ಶಬ್ಧಮಾಡುವ ಸೈಲೆನ್ಸ್ ಗಳನ್ನು ಅಳವಡಿಸಿಕೊಂಡು ಸಾರ್ವಜನಿಕ–ರಿಗೆ ತೊಂದರೆ ಕೊಡುತ್ತಿದ್ದವರಿಗೆ ಇಲ್ಲಿನ ಪಿಎಸ್ಐ ಸಂಜೀವ್ ತಿಪರೆಡ್ಡಿ ಮತ್ತೊಮ್ಮೆ ಶಾಕ್ ನೀಡಿದ್ದಾರೆ.

ಕಳೆದ ಕೆಲವು ದಿನಗಳ ಹಿಂದೆಯೇ ಕರ್ಕಶ ಶಬ್ಧ ಮಾಡುವ ಸೈಲೆನ್ಸ್ ಗಳನ್ನು ಕಳಚುವಂತೆ ಮತ್ತು ಕಳಚದವರಿಗೆ ಸೂಕ್ತ ಶಿಕ್ಷೆ ವಿಧಿಸುವದಾಗಿ ಮಾಧ್ಯಮದ ಮೂಲಕ ಎಚ್ಚರಿಕೆ ನೀಡಿದ್ದರು. ಇದಕ್ಕೆ ಕ್ಯಾರೇ ಎನ್ನದ ಎರಡು ಕರ್ಕಶ ಶಬ್ಧ ಮಾಡುವ ವಾಹನಗಳನ್ನು ಗುರುವಾರ ಸೀಸ್ ಮಾಡಿದ್ದಾರೆ. ಠಾಣೆಯಲ್ಲಿಯೇ ಶಬ್ಧ ಮಾಡುವ ಸೈಲೆನ್ಸ್ ಗಳನ್ನು ಕಳಚಿಸಿ ದಂಡದ ಬಿಸಿ ಮುಟ್ಟಿಸಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಪಿಎಸ್ಐ ಸಂಜೀವ, ಇಂತಹ ಅನ್ನೂ ಹಲವು ಪುಂಡರ ವಾಹನಗಳು ಪೊಲೀಸರ ಕಣ್ತಪ್ಪಿಸರ ಕಣ್ತಪ್ಪಿಸಿ ಅಲ್ಲಲ್ಲಿ ಓಡಾಡುತ್ತಿವೆ. ನಮ್ಮ ಸಿಬ್ಬಂದಿ ತಂಡ ಈಗಾಗಲೇ ಈ ಪುಂಡರಿಗೆ ಬಲೆ ಬೀಸಿದೆ. ಸಿಕ್ಕಲ್ಲಿ ಯಾರೇ ಇದ್ದರೂ ನಿರ್ದಾಕ್ಷಣ್ಯವಾಗಿ ಕಾನೂನು ಕ್ರಮ ಕೈಗೊಂಡು ನೇರವಾಗಿ ನ್ಯಾಯಾಲಯಕ್ಕೇ ಕಳುಹಿಸುವದಾಗಿ ಮತ್ತು ಈ ರೀತಿ ಕಾನೂನು ಬಾಹಿರವಾದ ಸೈಲೆನ್ಸ್ ಗಳನ್ನು ಅಳವಡಿಸಿಕೊಂಡು ವಾಹನ ರಿಪೇರಿಗೆ, ಸರ್ವೀಸ್ ಗೆ ಬಂದಲ್ಲಿ ಕೂಡಲೇ ಠಾಣೆಗೆ ಕರೆ ಮಾಡಲು ದ್ವಿಚಕ್ರ ವಾಹನಗಳ ಗ್ಯಾರೇಜ್ ಮತ್ತು ಶೊರೂಂ ನ ಮಾಲೀಕರು ಮತ್ತು ಸಿಬ್ಬಂದಿ ವರ್ಗದವರಿಗೆ ಸೂಚಿಸಿದ್ದಾರೆ. ಇಂತಹ ವಾಹನಗಳು ಬಂದಾಗ ಪೊಲೀಸ್ ಠಾಣೆಗೆ ತಿಳಿಸದೇ ರಿಪೇರಿ ಮಾಡುವಾಗ ನಮ್ಮ ಸಿಬ್ಬಂದಿಯ ಕೈಗೆ ಸಿಕ್ಕಲ್ಲಿ ಅವರ ಮೇಲೂ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಈ ವೇಳೆ ಸಿಬ್ಬಂದಿಗಳಾದ ಚಿದಾನಂದ ಸುರಗಿಹಳ್ಳಿ, ಯಾಸೀನ ಅತ್ತಾರ ಮತ್ತು ವಿರೇಶ ಹಾಲಗಂಗಾಧರಮಠ ಇದ್ದರು.

# ಅಪಘಾತ: ಗಾಯಾಳುಗಳಿಗೆ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ

**ಉದಯರಶ್ಮಿ ನ್ಯೂಸ್**



ಸಿಂದಗಿ: ಪಟ್ಟಣದ ಹೊರವಲಯದ ರಾಷ್ಟ್ರೀಯ ಹೆದ್ದಾರಿ–50ರ ರಸ್ತೆಯಲ್ಲಿ ಗುರುವಾರ ನಸುಕಿನ ಜಾವದಲ್ಲಿ ಟಾಟಾ ಏಸ್ ವಾಹನ ಪಲ್ಟಿಯಾದ ಪರಿಣಾಮ 15ಜನರು ಅಪಘಾತದಲ್ಲಿ ಗಾಯಗೊಂಡಿದ್ದಾರೆ.

ಇವರು ಹುನಗುಂದ ತಾಲೂಕಿನ ಬೆವಿನಾಳ ಗ್ರಾಮದಿಂದ ಅಫಜಲಪುರ ತಾಲೂಕಿನ ಘತ್ತರಗಿ ಭಾಗ್ಯವಂತಿ–ದೇವಿ ದೇವಾಲಯಕ್ಕೆ ಜವಳ ತೆಗೆಯುವ ಕಾರ್ಯಕ್ರಮಕ್ಕೆ ಟಾಟಾ ಏಸ್ ಗೂಡ್ಸ್ ವಾಹನದಲ್ಲಿ ಹೊರಟಿರುವ ಸಂದರ್ಭದಲ್ಲಿ ಪಟ್ಟಣದ ಹೊರವಲಯದ ರಾಷ್ಟ್ರೀಯ ಹೆದ್ದಾ–ರಿಯಲ್ಲಿ ಈ ಅಪಘಾತ ಸಂಭವಿಸಿದೆ. ಈ ಅಪಘಾತದಲ್ಲಿ ಸಣ್ಣ ಪುಟ್ಟ ಗಾಯಗಳಾಗಿವೆ.

ಈ ವೇಳೆ ಲಕ್ಷ್ಮೀ ಚೇತನ ಸೇಗುಣಸಿ, ದ್ರಾಕ್ಷಾಯಿಣಿ ಮಠತುಜಾ ಹಿರೇಮಠ, ಅನುರಾದಾ ದೇವಪ್ಪ ಮೇಟಿ, ನಿಲವ್ವ ಬಸಪ್ಪ ಮೇಟಿ ಸೇ–ರಿದಂತೆ ಮಕ್ಕಳು ಸೇರಿ 15ಜನರು ಗಾಯಗೊಂಡಿದ್ದಾರೆ. ಅಪಘಾತದಲ್ಲಿ ಗಾಯಗೊಂಡವರಿಗೆ ಚಿಕಿತ್ಸೆಗಾಗಿ ಸಿಂದಗಿ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ದಾಖಲೆ ಮಾಡಲಾಗಿದೆ. ಸಿಂದಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಅಪಘಾತ ಸಂಭವಿಸಿದೆ.

### ಸಶಸ್ತ್ರ ಪಡೆಗಳ ಧ್ವಜ ದಿನ ಆಚರಣೆಯಲ್ಲಿ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅಭಿಮತ

# ಸೈನಿಕರಿಗೆ ಕೃತಜ್ಞತೆ ಸಲ್ಲಿಸಲು ಸಶಸ್ತ್ರ ಪಡೆಗಳ ಧ್ವಜ ಸದಾವಕಾಶ



**ಉದಯರಶ್ಮಿ ನ್ಯೂಸ್**

ವಿಜಯಪುರ: ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ ಆಚ–ರಿಸಲಾಯಿತು.

ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು, ಈ ಸಂದರ್ಭದಲ್ಲಿ ಸಶಸ್ತ್ರ ಪಡೆಗಳ ಸಾಂಕೇತಿಕ ಧ್ವಜ ಬಿಡುಗಡೆಗೊಳಿಸಿ, ನಂತರ ಸಾಂಕೇತಿ–ಕವಾಗಿ ಧ್ವಜ ಸ್ವೀಕರಿಸಿ, ದೇಣಿಗೆ ನೀಡುವುದರ ಮೂಲಕ ಸಾರ್ವಜನಿಕ–ರಿಗೆ ಧ್ವಜಗಳನ್ನು ಮಾರಾಟ ಮಾಡಿ ದೇಣಿಗೆ ಸಂಗ್ರಹಿಸುವ ಕಾರ್ಯಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯನ್ನು ದೇಶದ ಎಲ್ಲ ಭಾಗಗಳಲ್ಲಿ ಪ್ರತಿ ವರ್ಷ ಇದೇ ದಿನ ಡಿ.7ರಂದು ಆಚರಿಸಲಾಗುತ್ತಿದೆ. ಸಶಸ್ತ್ರ ಪಡೆಗಳ ಧ್ವಜ ಬಿಡುಗಡೆ ಮಾಡಲಾಗುತ್ತದೆ. ಕೃತಜ್ಞತೆ ಸಲ್ಲಿಸಲು ಹಾಗೂ ಬೆಂಬಲ ವ್ಯಕ್ತಪಡಿಸಲು ಧ್ವಜ ದಿನಾಚರಣೆ ಒಂದು ಸದಾವಕಾಶ ಒದಗಿಸಿ ಕೊಡುತ್ತದೆ.ವೀರ ಯೋಧರ ಕುಟುಂಬಕ್ಕೆ ಬೆಂಬಲ ಒದಗಿಸಲು ಈ ದಿನಾಚರಣೆ ವೇದಿಕೆ.ಈ ನಿಧಿಯನ್ನು ಯುದ್ಧ ಸಂತ್ರಸ್ತರಿಗೆ, ಮಾಜಿ ಸೈನಿಕರು ಅವರ ಅವಲಂಬಿತರ ಸಲುವಾಗಿ ಹಮ್ಮಿಕೊಂಡ ವಿವಿಧ ಕಲ್ಯಾಣ ಮತ್ತು ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುತ್ತಿದೆ.

ಜಿಲ್ಲಾ ಮಟ್ಟದಲ್ಲಿ ಸೈನಿಕ ಕಲ್ಯಾಣ ಇಲಾಖೆಯು ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯ ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರ ಕುಟುಂಬಗಳಿಗೆ ಬಹಳಷ್ಟು ಕೆಲಸ ನಿರ್ವಹಿಸುತ್ತಿದೆ. ಮುಂಬರುವ ದಿನಗಳಲ್ಲಿ ಯೋಧರ ಹಾಗೂ ಅವರ ಕುಟುಂಬದ ದೃಷ್ಟಿಯಿಂದ ಇನ್ನೂ ರಚನಾತ್ಮಕವಾಗಿ ಕಾರ್ಯನಿರ್ವಹಿಸಬೇಕು. ಸೇವಾನಿರತರು ಹಾಗೂ ನಿವೃತ್ತ ಯೋಧರು ಹಾಗೂ ಅವರ ಅವಲಂಬಿತ ಕುಟುಂಬಕ್ಕೆ ಸಮಸ್ಯೆ ಉಂಟಾದರೆ ಅಧಿಕಾರಿ,ಸಿಬ್ಬಂದಿ ತಕ್ಷಣ ಸ್ಪಂದಿಸಬೇಕು. ಸಾರ್ವಜನಿಕರು ಧ್ವಜ ಖರೀದಿಸುವ ಮೂಲಕ ದೇಶದ ಸೈನಿಕರಿಗೆ ಬೆಂಬಲಿಸಬೇಕು ಎಂದು ಅವರು ಹೇಳಿದರು.

ಜಿಲ್ಲೆಯು 2022ನೇ ಸಾಲಿನ ಸಶಸ್ತ್ರ ಪಡೆಗಳ ಧ್ವಜ ನಿಧಿಗೆ ನಿಗದಿಪಡಿಸಲಾದ ಗುರಿ ಸಾಧಿಸಿರುವುದರಿಂದ ಈ ನಿಧಿಯು ಮಾಜಿ ಸೈನಿಕರು ಮತ್ತು ಅವರ ಅವಲಂಬಿತರ ಕಲ್ಯಾಣ ಕಾರ್ಯಕ್ರಮಗಳಿಗೆ ಅಮೂಲ್ಯ ನೆರವು ನೀಡಲಿದ್ದು, ಜಿಲ್ಲೆಯ ಕೊಡುಗೆಯನ್ನು ಪ್ರಶಂಸಿಸುವ ಉದ್ದೇಶದಿಂದ ಪ್ರೋತ್ಸಾಹಕ ಪಾರಿತೋಷಕ್ಕೆ ಜಿಲ್ಲೆಯು ಭಾಜನವಾಗಿದ್ದು ಹೆಮ್ಮೆ ಮೂಡಿಸುತ್ತಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾ–ರಿಗಳಾದ ಋಷಿಕೇಶ ಸೋನಾವಣೆ ಅವರು ಮಾತನಾಡಿ, ಮಾಜಿ ಸೈನಿಕರು ಮತ್ತು ಅವರ ಅವಲಂಬಿತರ ಸಲುವಾಗಿ ಹಮ್ಮಿಕೊಳ್ಳುವ ವಿವಿಧ ಕಲ್ಯಾಣ ಮತ್ತು ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಿಗೆ ಸಾರ್ವಜನಿಕರು ಧ್ವಜವನ್ನು ಹೆಚ್ಚೆಚ್ಚು ಖರೀದಿಸುವ ಮೂಲಕ ಕೈ ಜೋಡಿಸಬೇಕು ಎಂದು ಅವರು ಹೇಳಿದರು.

ಸೈನಿಕ ಶಾಲೆಯ ಪ್ರಾಂಶುಪಾಲರು ಗ್ರೂಪ್ ಕ್ಯಾಪ್ಟನ್ ಪ್ರತಿಭಾ ಬಿಷ್ಟ್, ಕರ್ನಲ್ ಭೀಮಾಶಂಕರ್ ಹಿಪ್ಪರಗಿ, ಸೈನಿಕ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಶ್ರೀಮತಿ ಜಿ.ಆರ್.ವಿನೂತ, ಮಾಜಿ ಸುಬೇದಾರ ಕ್ಯಾಪ್ಟನ್ ಸೂರ್ಯವಂಶಿ, ಶೇಗುಣಸಿ, ಲೆಫ್ಟಿನೆಂಟ್ ಎಂ.ಸುಭಾನಿ, ಆಯುಷ್ ಇಲಾಖೆಯ ಡಾ.ಎಸ್ ಆರ್. ಪಾಟೀಲ್ ಸೇರಿದಂತೆ ಇತರೆ ಮಾಜಿ ಸೈನಿಕರು ಜಿಲ್ಲಾಧಿಕಾರಿ ಕಚೇರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಡಿ.9 ರಂದು ರೇಡಿಯಾಲಾಜಿ– ಐಆರ್ಐಎ ರಾಜ್ಯ ಸಮ್ಮೇಳನ ಉದ್ಘಾಟನೆ

**ಉದಯರಶ್ಮಿ ನ್ಯೂಸ್**



ವಿಜಯಪುರ: ಕರ್ನಾಟಕ ರಾಜ್ಯ 38ನೇ ರೇಡಿಯಾಲಾಜಿ– ಐಆರ್ಐಎ ಸಮ್ಮೇಳನ ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಡಿಸೆಂಬರ್ 8 ರಿಂದ 10ರ ವರೆಗೆ ಮೂರು ದಿನಗಳ ಕಾಲ ನಡೆಯಲಿದೆ.

ಕಟಿಂಗ್ ಎಡ್ಜ್ ಆಂಡ್ ಅಡ್ವಾನ್ಸಸ್ ವಿಷಯದಡಿ ಈ ಬಾರಿ ಸಮ್ಮೇಳನ ನಡೆಯುತ್ತಿದ್ದು, ಡಿಸೆಂಬರ್ 9 ರಂದು ಬೆಳಿಗ್ಗೆ 11 ಗಂಟೆಗೆ ವೈದ್ಯಕೀಯ ಕಾಲೇಜಿನ ಗ್ರಂಥಾಲಯ ಸಭಾಂಗಣದಲ್ಲಿ ಉದ್ಘಾಟನೆ ಕಾರ್ಯಕ್ರಮ ನಡೆಯಲಿದೆ. ಬೃಹತ್ ಮತ್ತು ಮಧ್ಯಮ ಕೈಗಾ–ರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಸಮ್ಮೇಳನ ಉದ್ಘಾಟಿಸಲಿದ್ದಾರೆ.

ಈ ಸಂದರ್ಭದಲ್ಲಿ ಆರೋಗ್ಯ ಸಚಿವ ದಿನೇಶ ಗುಂಡೂರಾವ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ವಿವಿ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಪತಿ ಡಾ. ಆರ್. ಎಸ್. ಮುಧೋಳ, ಸಮಕುಲಪತಿ ಡಾ. ಅರುಣ ಚಂ. ಇನಾಮದಾರ, ರಜಿಸ್ಟ್ರಾರ್ ಡಾ. ಆರ್. ವಿ. ಕುಲಕರ್ಣಿ, ಐ.ಆರ್.ಐಎ ರಾಷ್ಟ್ರೀಯ ಅಧ್ಯಕ್ಷ ಡಾ. ಉಮೇಶ ಕೃಷ್ಣಮೂರ್ತಿ, ರಾಜ್ಯಾಧ್ಯಕ್ಷ ಡಾ. ಪಿ. ಬಿ. ಶೆಟ್ಟಿ, ರಾಜ್ಯ ಕಾರ್ಯದರ್ಶಿ ಡಾ. ರವಿ, ಬಿ.ಎಲ್.ಡಿ.ಎ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ಡಾ. ಅರವಿಂದ ಪಾಟೀಲ, ಅಲೈಡ್ ಸಾಯಿನ್ಸ್ ಡೀನ್ ಡಾ. ಎಸ್. ವಿ. ಪಾಟೀಲ, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಾಜೇಶ ಹೊನ್ನುಟಗಿ ಮುಂತಾದವರು ಪಾಲ್ಗೊಳ್ಳಲಿದ್ದಾರೆ.

ದೇಶದ ನಾನಾ ಭಾಗಗಳಿಂದ ಸುಮಾರು 500ಕ್ಕೂ ಹೆಚ್ಚು ಪ್ರತಿನಿಧಿಗಳುಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದು, ಡಿಸೆಂಬರ್ 8 ರಂದು ಪೂರ್ವ ಸಮ್ಮೇಳನ(ಕಡಿಜ ಅಂಟಜಿಜಡಿಜಟಿಛಿಜ) ನಡೆಯಲಿದೆ. ಡಿಸೆಂಬರ್ 9 ಮತ್ತು 10 ರಂದು ರೇಡಿಯಾಲಜಿ ವಿಷಯಕ್ಕೆ ಸಂಬಂಧಿಸಿದಂತೆ ನಾನಾ ಗೋಷ್ಠಿಗಳು ನಡೆಯಲಿವೆ. 50ಕ್ಕೂ ಹೆಚ್ಚು ತಜ್ಞವೈದ್ಯರು ಉಪನ್ಯಾಸ ನೀಡಲಿದ್ದಾರೆ.

ಅಲ್ಲದೇ, ಸುಮಾರು 30ಕ್ಕೂ ಹೆಚ್ಚು ರೆಡಿಯಾಲಜಿ ಕಂಪನಿಗಳು ತಾವು ಸಂಶೋಧಿಸಿರುವ ನೂತನ ತಂತ್ರಜ್ಞಾನಗಳು, ಸಂಶೋಧನೆಗಳನ್ನು ಈ ಸಂದರ್ಭದಲ್ಲಿ ಪ್ರಸ್ತುತ ಪಡಿಸಲಿದ್ದಾರೆ ಎಂದು ಬಿ.ಎಲ್.ಡಿ.ಇ ಆಸ್ಪತ್ರೆಯ ರೆಡಿಯೋಲಾಜಿ ವಿಭಾಗದ ಮುಖ್ಯಸ್ಥ ಮತ್ತು ಸಮ್ಮೇಳನ ಸಂಘಟನಾ ಅಧ್ಯಕ್ಷ ಡಾ. ರಾಜಶೇಖರ ಮುಚ್ಚಂಡಿ ತಿಳಿಸಿದ್ದಾರೆ.

ಈ ಸಮ್ಮೇಳನದ ಆಯೋಜನೆಯಿಂದ ಈ ಭಾಗದ ರಿಡಿಯಾಲಜಿ ವೈದ್ಯರು ಮತ್ತು ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲಿದೆ. ಜ್ಞಾನ ವಿನಿಮಯಕ್ಕೂ ಹೆಚ್ಚಿಗೆ ಸಹಾಯವಾಗಲಿದೆ ಎಂದು ಸಮ್ಮೇಳನ ಸಂಘಟನಾ ಕಾರ್ಯದರ್ಶಿ ಡಾ. ಶಿವಾನಂದ ಪಾಟೀಲ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

# ರಾಜ್ಯದಲ್ಲಿ ಅಭಿವೃದ್ಧಿಯ ಬರ :ಮಾಜಿ ಎಎಲ್ಸಿ ಶಹಾಪೂರ

**ಉದಯರಶ್ಮಿ ನ್ಯೂಸ್**



ವಿಜಯಪುರ: ರಾಜ್ಯದಲ್ಲಿ ಕೇವಲ ಮಳೆಯ ಬರ ಬಿದ್ದಿಲ್ಲ, ಅಭಿವೃದ್ಧಿಯ ಬರವೂ ಸಿದ್ದರಾಮಯ್ಯ ಸರ್ಕಾರದಲ್ಲಿ ಎದ್ದು ಕಾಣುತ್ತಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಹಪೂರ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಅನುದಾನಿತ ಈಗಾಗಲೇ ಕೆಲಸ ಮಾಡುತ್ತಿರುವ ಅನುದಾನಿತ ಪದವಿ ಪೂರ್ವ ಉಪನ್ಯಾಸಕರುಗಳು ಕಡ್ಡಾಯವಾಗಿ 20 ಗಂಟೆಗಳ ಕಾರ್ಯಭಾರ ನಿರ್ವಹಿಸಬೇಕು. ಸಮೀಪದ ಇನ್ನೊಂದು ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ ಇದ್ದಲ್ಲಿ ಅಲ್ಲಿ ಹೋಗಿ ಕಾರ್ಯ ನಿರ್ವಹಿಸಬೇಕು ಎಂಬ ಆದೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಮಾಡಿರುವುದು ತುಘಲಕ್ ಆಡಳಿತ ಮಾದರಿ ಆದೇಶ ಎಂದು ಕಿಡಿಕಾರಿದರು.

ಉಪನ್ಯಾಸಕರು ತಾವು ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಯಿಂದ ಮತ್ತೊಂದು ಶಿಕ್ಷಣ ಸಂಸ್ಥೆಗೆ ಹೋಗಿ ಕೆಲಸ ಮಾಡುವುದು ಅಸಾಧ್ಯವಾದ ಕೆಲಸ. ಸರ್ಕಾರ ಏಕಾಏಕಿ ಈ ರೀತಿಯ ಆದೇಶದಿಂದ ಮುಂದಿನ ತಿಂಗಳು ನಮ್ಮ ಸಂಬಳ ಬರುತ್ತೋ ಇಲ್ಲವೋ ಎನ್ನುವ ಆತಂಕದಲ್ಲಿ ಉಪನ್ಯಾಸಕರು ಕಾರ್ಯನಿರ್ವಹಿಸಬೇಕಾಗಿ ಬಂದಿದೆ. ವರ್ಷದಲ್ಲಿ 3 ಬಾರಿ ಪರೀಕ್ಷೆ ನಡೆಸಬೇಕು ಎಂದು ಆದ–ೇಶ ಮಾಡಿದೆ. ಕರ್ನಾಟಕದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಕವಲುದಾರಿಯಲ್ಲಿದೆ. ರಾಜ್ಯದಲ್ಲಿ 1230 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು, 750 ಅನುದಾನಿತ ಪ.ಪೂ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದರೆ, ಇನ್ನೂ 4500 ಅನುದಾನರಹಿತ ಪ.ಪೂ.ಕಾಲೇಜುಗಳು ಸರ್ಕಾರ ಅನುದಾನ ಕೊಡುತ್ತದೆ ಎಂದು ಜಾತಕಪಕ್ಷಿಗಳಂತೆ ಕಾಯುತ್ತಿವೆ. ಸರ್ಕಾರ 1995 ರ ನಂತರದ ಅನುದಾನ ವಿಸ್ತರಣೆ ಮಾಡಬೇಕು ಎನ್ನುವ ಕೂಗು ಇದೆ. ಅದನ್ನು ಮೊದಲು ಮಾಡಲಿ ಎಂದರು.

ನಮ್ಮ ಬಿಜೆಪಿ ಸರ್ಕಾರದ ಅವಧಿಯಲ್ಲಿ 3000 ಕ್ಕೂ ಅಧಿಕ ಶಿಕ್ಷಣ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸಲಾಗಿದೆ. ಶಿಕ್ಷಣದ ಕುರಿತು ನಿಮ್ಮ ಕಾಂಗ್ರೆಸ್ ಪ್ರಣಾಳಿಕೆಯಲ್ಲಿನ ಭರವಸೆಗಳನ್ನು ಈಡೇರಿಸಬೇಕು. ಕರ್ನಾಟಕ ಪ.ಪೂ.ಶಿಕ್ಷಣ ಇಲಾಖೆ ಇಡೀ ರಾಷ್ಟ್ರಕ್ಕೆ ಮಾದರಿಯಾಗಿದೆ. ಕೂಡಲೇ ಅನುದಾನಿತ ಉಪನ್ಯಾಸಕರಿಗೆ ಕಾರ್ಯಭಾರ ಆದೇಶವನ್ನು ಹಿಂದಕ್ಕೆ ಪಡೆದುಕೊಳ್ಳಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸಬೇಕು ಎನ್ನುವ ಕೂಗು ಇದೆ. ಅದನ್ನು ಸರ್ಕಾರ ಪರಿಗಣಿಸಬೇಕು. ಕಾರ್ಯಭಾರ ಅವಧಿ 15 ಇದ್ದದ್ದನ್ನು 16 ಮಾಡಿ ಆದೇಶ ಮಾಡುತ್ತೇವೆ ಎಂದು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಹೇಳಿದ್ದರು. ಅವರು ಮಾಡಲಿ ಒಂದು ವೇಳೆ ಈ ಸರ್ಕಾರ ತೊಲಗಿ ನಮ್ಮ ಸರ್ಕಾರ ಬಂದರೆ ನಾವು ಖಂಡಿತ ಮಾಡುತ್ತೇವೆ ಎಂದರು.

ರಾಜ್ಯದಲ್ಲಿ ಆಡಳಿತ ಕುಸಿದು ಬಿದ್ದಿದೆ. ಹೇಗಾದರೂ ಮಾಡಿ ಕೇಂದ್ರದಲ್ಲಿ ಅಧಿಕಾರ ಹಿಡಿಯಬೇಕು ಎನ್ನುವ ಉದ್ದೇಶದಿಂದ ಉಚಿತ ಯೋಜನೆಗಳನ್ನು ನೀಡುತ್ತಿದ್ದಾರೆ. ಅಭಿವೃದ್ಧಿ ಕುಂಟಿತಗೊಂಡಿದೆ. ಸಿದ್ದರರಾಮಯ್ಯ ಒಂದೇ ಒಂದು ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಿಲ್ಲ. ಕೇವಲ ಹಿಂದಿನ ಸರ್ಕಾರ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಉದ್ಘಾಟನೆ ಮಾಡತ್ತಿದ್ದರೆ. ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಇರುವ ವ್ಯವಸ್ಥೆಯನ್ನೇ ಉಳಿಸಿಕೊಳ್ಳಲು ಸಾಧ್ಯವಾಗದೆ ಈ ರೀತಿ ಆಡಳಿತ ನಡೆಸುತ್ತಿದ್ದಾರೆ ಎಂದು ಕಿಡಿ ಕಾರಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪದವಿ ಪೂರ್ವ ನೌಕರರ ಸಂಘದ ಜಿಲ್ಲಾಧ್ಯಕ್ಷ ಸಾಹೇಬಗೌಡ ಗೌರಿ, ಪದವಿ ಪೂರ್ವ ಉನ್ಯಾಸಕರ ಸಂಘದ ಜಿಲ್ಲಾಧ್ಯಕ್ಷ ಎಂ.ಬಿ.ಹೆಬ್ಬಿ ಉಪಸ್ಥಿತರಿದ್ದರು.

# ಆಚಾರವಿಲ್ಲದ ನಾಲಿಗೆ



“ ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ದಿಯ ಬಿಡು ನಾಲಿಗೆ” ಎಷ್ಟು ಅರ್ಥಪೂರ್ಣವಾದ ಹಾಡಿನ ಸಾಲು.ಪುರಂಧರ ದಾಸರ ಈ ಕೀರ್ತನೆ ಕೇಳಿದಷ್ಟೂ ಕೇಳಬೇಕೆನಿಸುತ್ತದೆ.ನೀತಿ ಬೋಧಿಸುವ ಈ ಕೀರ್ತನೆಯ ಪ್ರತಿ ಶಬ್ದದಲ್ಲೂ ಒಳ್ಳೆಯ ಅರ್ಥವಿದೆ..

ನಮ್ಮ ನಾಲಿಗೆ ಎನ್ನುವುದು ಒಂದು ಅಸ್ತ್ರದಂತೆ’..”ಬಾಯಿಯಿದ್ದರೆ ಮಗ ಬದುಕಿಯಾನು”ಎನ್ನುವ ಗಾದೆ ಮಾತೊಂದಿದೆ.ಬಾಯಿ ಅಂದರೆ ಇಲ್ಲಿ ನಾಲಗೆ.ಅಂದರೆ ಮಾತನಾಡುವ ಕಲೆ ತಿಳಿದಿರಬೇಕು.ಬಾಯಿಗೆ ಬಂದಂತೆ ಮಾತನಾಡಿದರೆ ಕೆಲವೊಮ್ಮೆ ಅಭಾಸವಾಗಬಹುದು..ಮಕ್ಕಳೊಡನೆ ಮಕ್ಕಳಾಗಿ ಹಿರಿಯರೊಡನೆ ಗೌರವದಿಂದ ಅತನಾಡುವ ಕಲೆ ತಿಳಿದಿರಬೇಕು..

ನಾಲಗೆ ಎನ್ನುವುದು ನಮ್ಮ ಪಂಚೇಂದ್ರಿಯಗಳಲ್ಲಿ ಒಂದು ಮುಖ್ಯವಾದ ಅಂಗ.ಬಾಯಿ ರುಚಿಯನ್ನು ತಿಳಿಸುವ,ನಮ್ಮ ಅಭಿಪ್ರಾಯಗಳನ್ನು ಮಂಡನೆ ಮಾಡುವ,ಒಳಿತು ಕೆಡುಕಗಳನ್ನು ವಿಮರ್ಶಿಸಿ ತಿಳಿಸಲು ಅನುಕೂಲವಾಗುವ ಇಂದ್ರಿಯ.

“ ಅವನಿಗೆ ಕುತ್ತಿಗೆ ಸುತ್ತಲೂ ನಾಲಗೆ” ಎನ್ನುವ ಮಾತೊಂದು ರೂಡಿಯಲ್ಲಿದೆ.ಅಂದರೆ ತುಂಬಾ ಮಾತನಾಡುವವನು ಅಂತ ಮಾತು ತುಂಬಾ ಆಡಲಿ ಆದರೆ ಹೆಚ್ಚು ಮಾತನಾಡಿ ವಿನಾ ಕಾರಣ ಜಗಳ ಆಗ ಬಾರದು.” ಮಾತು ಬೆಳ್ಳಿ ಮೌನ ಬಂಗಾರ” ಎಂಬ ಮಾತೊಂದಿದೆ.ಎಷ್ಟು ಬೇಕೋ ಅಷ್ಟು ಮಾತಾನಾಡಬೇಕು..ಅದು ಹೆಚ್ಚಾಗ ಬಾರದು..

ನಾಲಗೆಯು ಹಿಡಿತದಲ್ಲಿರಬೇಕು. ಅವರಿವರ ಬಗ್ಗೆ ಇಲ್ಲ ಸಲ್ಲದ ಮಾತನಾಡುವುದು,ಚಾಡಿ ಹೇಳುವುದು,ಒಳ್ಳೆಯದಲ್ಲ.ಹಿತ ಮಿತವಾದ ಮಾತು..ಎಲ್ಲಿ ಹೇಗೆ ಬೇಕೋ ಹಾಗೆ ಮಾತನಾಡಿ ಸ್ನೇಹ,ಸೌಹಾರ್ದತೆಯನ್ನು ಉಳಿಸಿಕೊಳ್ಳುವುದು ಉತ್ತಮ..



**ಭಾವರಶ್ಮಿ**

– ಜಯಲಕ್ಷ್ಮಿ. ಆರ್.ಹೊಳ್ಳ, ಉಪ್ಪಳ, ಕಾಸರಗೋಡು.
(“ನಮ್ಮ ಕಥಾ ಅರಮನೆ” ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

# ಶಿಕ್ಷಕರ ಸಹಪಠ್ಯ ಚಟುವಟಿಕೆ & ಚಿತ್ರಕಲಾ ಸ್ಪರ್ಧೆ

**ಉದಯರಶ್ಮಿ ನ್ಯೂಸ್**



ವಿಜಯಪುರ: ನಗರದ ಮರಾಠಾ ವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮವನ್ನು ಆಯೋಜಿಸಿದ ಜಿಲ್ಲಾ ಪಂಚಾಯತ ವಿಜಯಪುರ ಶಾಲಾ ಶಿಕ್ಷಣ ಇಲಾಖೆ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ದಿ ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು ಹಾಗೂ ಉಪನಿರ್ದೇಶಕರ ಕಾರ್ಯಾಲಯ ಶಾಲಾ ಶಿಕ್ಷಕರ ಇಲಾಖೆ ವಿಜಯಪುರ ರವರಿಂದ ಜಿಲ್ಲಾ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಶಿಕ್ಷಕರ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆ–2023–24 ಸಾಲಿನ ಚಿತ್ರಕಲಾ ಸ್ಪರ್ಧೆಯಲ್ಲಿ ಶಾಲೆಯ ಅಲ್–ಅಮಾನ್ ಬಾಲಕರ ಉರ್ದು ಪ್ರೌಢಶಾಲೆ, ವಿಜಯಪುರ ಶಿಕ್ಷಕರಾದ ಎಸ್.ಬಿ. ವಾಲಿಕಾರ ಶಿಕ್ಷಕ (ಕಲಾವಿದರು) ಭಾಗವಹಿಸಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದು, ನಮ್ಮ ಜಿಲ್ಲೆಯ ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ. ಹಾಗೂ ಈ ಕಾರ್ಯಕ್ರಮದಲ್ಲಿ ಎನ್.ಎಚ್. ನಾಗೂರ (ಡಿ.ಡಿ.ಪಿ.ಐ) ಹಾಗೂ ವಿಷಯ ಪರೀವೀಕ್ಷಕಿ ಶ್ರೀಮತಿ ಎಸ್.ಎ. ಅಳ್ಳಗಿ, ವಿ.ಆರ್. ಹಿರೇಮಠ ಡಿವೈಎಸ್ಪಿ, ಶ್ರೀಮತಿ ಟಿ.ಸಿ. ಕೋಲಾರ ಹಾಗೂ ನೌಕರ ಸಂಘದ ಜಿಲ್ಲಾಧ್ಯಕ್ಷ ಸುರೇಶ ಶೆಡಶ್ಯಾಳ ಹಾಗೂ ಜಿಲ್ಲಾ ನೌ.ಸ. ಖಜಾಂಚಿ ಜುಬೇರ ಕೆರೂರ, ಪ್ರಾ.ಶಾ.ಶಿ.ಸ.ಜಿಲ್ಲಾದ್ಯಕ್ಷ ಶಿವರಾಜ ಬಿರಾದಾರ, ಎನ್.ಪಿ.ಎಸ್. ಅದ್ಯಕ್ಷ ಮಲ್ಲನಗೌಡ ಹಡಲಗೇರಿ ಮಹಾಂತೇಶ ಅಂಗಡಿ ಇನ್ನಿತರರು ಉಪಸ್ಥಿತರಿದ್ದರು.

ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ನಮ್ಮ ಶಾಲೆಯ ಶಿಕ್ಷಕರಾದ ಎಸ್.ಬಿ. ವಾಲಿಕಾರ ರವರಿಗೆ ಶಾಲೆಯ ವತಿಯಿಂದ ಹಾಗೂ ಸಂಸ್ಥೆಯ ಅದ್ಯಕ್ಷರಾದ ಎ.ಎಮ್. ಬಾಗವಾನ, ಕಾರ್ಯದರ್ಶಿ ಕೆ.ಎಸ್. ಸಾಂಗ್ಲಿಕರ, ನಿರ್ದೇಶಕರಾದ ಅತೀಕ ನಾಲಬಂದ, ಮುಖ್ಯ ಶಿಕ್ಷಕಿ ಶ್ರೀಮತಿ ಎನ್.ಬಿ. ಜಾಗೀರದಾರ ಹಾಗೂ ಶಿಕ್ಷಕ ವೃಂದ ಹಾಗೂ ಎಲ್ಲ ವಿದ್ಯಾರ್ಥಿಗಳು ಸಂಸ್ಥೆಯವರು ಅಭಿನಂದನೆ ಸಲ್ಲಿಸಿದರು.